ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	431
ಸದಸ್ಯರ ಹೆಸರು	:	ಶ್ರೀ ಕೆ.ಟಿ.ಶ್ರೀಕಂಠೇಗೌಡ
ಉತ್ತರಿಸುವ ದಿನಾಂಕ	:	18.02.2022.
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ನಿಗಮಗಳು/ಮಂಡಳಿ/ಅಕಾಡೆಮಿ/ ಸೊಸೈಟಿ ಇತರೆಗಳು ಯಾವುವು; ಇವುಗಳನ್ನು ಯಾವಾಗ ಸ್ಥಾಪನೆ ಮಾಡಲಾಯಿತು; ಇವುಗಳ ಉದ್ದೇಶಗಳೇನು; ಇವುಗಳಲ್ಲಿ ಜಾರಿಯಲ್ಲಿರುವ ಯೋಜನೆಗಳಾವುವು; (ನಿಗಮವಾರು ವಿವರವಾದ ಮಾಹಿತಿ ನೀಡುವುದು:)	ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ನಿಗಮಗಳ ಮಾಹಿತಿಯನ್ನು **ಅನುಬಂಧ-1** ರಲ್ಲಿ ನೀಡಿದೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ನಿಗಮಗಳ ಮಾಹಿತಿಯನ್ನು **ಅನುಬಂಧ-2** ರಲ್ಲಿ ನೀಡಿದೆ.
ಆ)	ಪ್ರಸಕ್ತ ವರ್ಷದಲ್ಲಿ ರಾಜ್ಯದ ಒಕ್ಕಲಿಗರನ್ನು ದೇವರಾಜು ಅರಸು ನಿಗಮದ ಯೋಜನೆಗಳಿಂದ ಕೈಬಿಡಲಾಗಿದೆಯೇ; ಒಕ್ಕಲಿಗರನ್ನು ದೇವರಾಜು ಅರಸು ನಿಗಮದ ಯೋಜನೆಗಳಿಂದ ಕೈಬಿಡಲಾಗಿದೆಯೇ; ಒಕ್ಕಲಿಗರ ನಿಗಮದಿಂದ ಪ್ರಸಕ್ತ ವರ್ಷದಲ್ಲಿ ರಾಜ್ಯದಲ್ಲಿ ಯಾವುದೇ ಯೋಜನೆ ಕೈಗೊಂಡಿರುವುದಿಲ್ಲವಾದುದರಿಂದ ರಾಜ್ಯದ ಒಕ್ಕಲಿಗರಿಗೆ ಅನ್ಯಾಯವಾಗಿದ್ದು, ಈ ಅನ್ಯಾಯವನ್ನು ಸರ್ಕಾರವು ಯಾವ ರೀತಿ ಸರಿಪಡಿಸಲಾಗುವುದು; (ವಿವರವಾದ ಮಾಹಿತಿ ನೀಡುವುದು:)	ಹೌದು 2021-22ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ-148ರಲ್ಲಿ ಒಕ್ಕಲಿಗ ಸಮುದಾಯದ ಸರ್ವತೋಮುಖ ಅಭಿವೃದ್ಧಿಗಾಗಿ ಹೊಸ ನಿಗಮವನ್ನು ಸ್ಥಾಪಿಸಲಾಗುವುದು. ಹಾಗೂ ನಿಗಮದ ಚಟುವಟಿಕೆಗಳಿಗೆ 500.00 ಕೋಟಿಗಳ ವೆಚ್ಚ ಮಾಡಲು ಯೋಜಿಸಲಾಗಿದೆ ಎಂದು ಘೋಷಿಸಿದ್ದು, ರೂ.50.00 ಕೋಟಿಗಳನ್ನು ಹಂಚಿಕೆ ಮಾಡಲಾಗಿರುತ್ತದೆ. ಈ ನಿಗಮ ಸ್ಥಾಪನೆ ಮಾಡಲು ಸರ್ಕಾರವು ಆದೇಶ ಹೊರಡಿಸಿರುತ್ತದೆ. ಸದರಿ ನಿಗಮವನ್ನು ಕಂಪನಿ ಕಾಯ್ದೆ 2013 ರನ್ವಯ Registrar Of Companies, Banglore Ministry of Corporate Affairs ಇಲ್ಲಿ ನೋಂದಾಯಿಸಿ ಪ್ರಕ್ರಿಯೆ ಪ್ರಗತಿಯಲ್ಲಿದೆ. ನೋಂದಣಿಯಾದ ನಂತರ ಯೋಜನೆಗಳನ್ನು ರೂಪಿಸಿ ಒಕ್ಕಲಿಗ ಸಮುದಾಯದ ಅಭಿವೃದ್ಧಿಗೆ ಕ್ರಮವಹಿಸಲಾಗುವುದು. ಹೀಗಾಗಿ ರಾಜ್ಯದ ಒಕ್ಕಲಿಗರಿಗೆ ಅನ್ಯಾಯವಾಗಿರುವುದಿಲ್ಲ.

ಇ)	ಸದರಿ ನಿಗಮಗಳಿಂದ ಭೂ-ರಹಿತ ರೈತರಿಗೆ ಭೂಮಿ ಹಂಚಿಕೆ ಮಾಡಲು ಕಳೆದ 3 ವರ್ಷಗಳಿಂದ ಎಷ್ಟು ಹಣವನ್ನು ನೀಡಲಾಗಿದೆ: (ನಿಗಮವಾರು, ವರ್ಷಾವಾರು ವಿವರವಾದ ಮಾಹಿತಿ ನೀಡುವುದು:)	ವಿವರಗಳನ್ನು **ಅನುಬಂಧ-3** ರಲ್ಲಿ ನೀಡಿದೆ.
ಈ)	ಸದರಿ ನಿಗಮಗಳಿಂದ ಮೈಸೂರು, ಮಂಡ್ಯ ಮತ್ತು ತುಮಕೂರು ಜಿಲ್ಲೆಗಳಲ್ಲಿ ಕಳೆದ 3 ವರ್ಷಗಳಿಂದ ಎಷ್ಟು ಭೂ ರಹಿತ ರೈತರಿಗೆ ಭೂಮಿ ನೀಡಲಾಗಿದೆ: ಈ ಸಂಬಂಧ ಎಷ್ಟು ಹಣ ಪಾವತಿ ಮಾಡಲಾಗಿದೆ? (ವರ್ಷಾವಾರು, ರೈತರ ವಿಳಾಸವಾರು ವಿವರವಾದ ಮಾಹಿತಿ ನೀಡುವುದು:)	ವಿವರಗಳನ್ನು **ಅನುಬಂಧ-4** ರಲ್ಲಿ ನೀಡಿದೆ.

ಸಂಖ್ಯೆ: ಸಕಇ 34 ಆರ್‌ಇಐ 2022

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು.

ಅನುಬಂಧ-1

ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಗೆ ಬರುವ ನಿಗಮ/ಮಂಡಳಿಗಳು

1) ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ

ಅಭಿವೃದ್ಧಿ ನಿಗಮವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರನ್ನು ಬಡತನರೇಖೆಗಿಂತ ಮೇಲೆ ತರುವ ಉದ್ದೇಶದಿಂದ ಕರ್ನಾಟಕ ಸರಕಾರದಿಂದ 1975ರಲ್ಲಿ ಸ್ಥಾಪಿಸಲ್ಪಟ್ಟಿರುತ್ತದೆ. ದಿನಾಂಕ:16.08.2005ರಲ್ಲಿ **ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ** ಎಂದು ಪುನರ್‌ನಾಮಕರಣ ಮಾಡಲಾಯಿತು. ಪ್ರಸ್ತುತ ನಿಗಮವು ಪರಿಶಿಷ್ಟ ಜಾತಿಯವರ ಆರ್ಥಿಕ ಅಭಿವೃದ್ಧಿಗಾಗಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.

ಬಡತನದ ರೇಖೆಗಿಂತ ಕೆಳಗಿರುವ ಪರಿಶಿಷ್ಟ ಜಾತಿಯವರ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಅಭಿವೃದ್ಧಿಪಡಿಸುವುದು. ಸಾಲಸೌಲಭ್ಯಗಳು ಮತ್ತು ಅನುದಾನಿತ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಶ್ರಮಿಸುವುದೇ ನಿಗಮದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ನಿಗಮದ ಕಾರ್ಯಕ್ರಮಗಳನ್ನು ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಕಾರ್ಯಕ್ರಮದ ಅನುಷ್ಠಾನದ ಜವಾಬ್ದಾರಿಯನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕಛೇರಿಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿವೆ.

2) ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ

ಕರ್ನಾಟಕ ರಾಜ್ಯದಲ್ಲಿರುವ ಭೋವಿ ಜನಾಂಗದವರ ಸರ್ವತೋಮುಖ ಅಭಿವೃದ್ಧಿಗಾಗಿ ಹಾಗೂ ಅವರುಗಳು ಅನುಭವಿಸುತ್ತಿರುವ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಿ ಗೌರವಯುತವಾದ ಹಾಗೂ ನೆಮ್ಮದಿಯ ಜೀವನವನ್ನು ಸಾಗಿಸಲು ಅನುಕೂಲವಾಗುವ ದೃಷ್ಟಿಯಿಂದ ಕಂಪನಿ ಕಾಯ್ದೆ 2013ರ ಕಲಂ 08ರ ಅಡಿಯಲ್ಲಿ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮವನ್ನು ಸ್ಥಾಪಿಸಿರುತ್ತದೆ.

ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರವು ಪ್ರತಿ ವರ್ಷ ವಿವಿಧ ಅಭಿವೃದ್ಧಿ ಯೋಜನೆಯಡಿ (SCSP) ಅನುದಾನವನ್ನು ನಿಗಧಿಪಡಿಸಲಾಗಿದೆ.

ಕರ್ನಾಟಕ ಭೋವಿ ಅಭಿವೃದ್ಧಿ ನಿಗಮವನ್ನು ಭೋವಿ ಜನಾಂಗದ ಆರ್ಥಿಕ ಹಿತದೃಸರ್ಕಾರದ ಆದೇಶ ಸಂಖ್ಯೆ:-ಸಕಇ 40 ಎಸ್‌ಎಲ್‌ಪಿ 2011 ದಿನಾಂಕ: 29.02.2016 ರಂದು ಸ್ಥಾಪಿಸಲಾಗಿದೆ. ದಿನಾಂಕ:08-10-2017 ರಂದು ಲೋಕಾರ್ಪಣೆ ಮಾಡಲಾಗಿದೆ.

ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಸುತ್ತಿರುವ ಯೋಜನೆಗಳ ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ.

3) ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮ

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಆಭಿವೃದ್ಧಿ ನಿಗಮವು ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿದು. ನಿಗಮವು 2016ರಲ್ಲಿ ಸ್ಥಾಪಿಸಿದ್ದು ಇದರ ಮೂಲ ಉದ್ದೇಶ ಸಫಾಯಿ ಕರ್ಮಚಾರಿ/ಮ್ಯಾನ್ಯುಯಲ್ ಸ್ಕಾವೆಂಜರ್ಸ್‌ಗಳ ಪುನರ್ ವಸತಿಗಾಗಿ ಸ್ಥಾಪಿಸಲಾಗಿದೆ.

1. ಸ್ವಯಂ ಉದ್ಯೋಗ - ನೇರಸಾಲ
2. ಸ್ವಯಂ ಉದ್ಯೋಗ - ಐಎಸ್‌ಬಿ
3. ಐರಾವತ
4. ಮೈಕ್ರೋ ಕ್ರೆಡಿಟ್ ಯೋಜನೆ
5. ಸಕ್ಕಿಂಗ್ ಮತ್ತು ಜಟ್ಟಿಂಗ್ ಯಂತ್ರ ಯೋಜನೆ
6. ಟ್ಯಾಬ್ ವಿತರಣಾ ಯೋಜನೆ
7. ದ್ವಿಚಕ್ರ ವಾಹನ ವಿತರಣಾ ಯೋಜನೆ

4) ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ

ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮವು ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಕರ್ನಾಟಕ ಸರ್ಕಾರವು ಕಂಪನಿ ಕಾಯ್ದೆ 1956ರ ಅಡಿಯಲ್ಲಿ, ದಿನಾಂಕ 23.2.2009 ರಂದು ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತವನ್ನು ಸ್ಥಾಪಿಸಿರುತ್ತದೆ.

ಉದ್ದೇಶಗಳು:

- ತಾಂಡಾಗಳ ಹಾಗೂ ತಾಂಡಾ ನಿವಾಸಿಗಳ ಸಮಗ್ರ ಅಭಿವೃದ್ಧಿಗಾಗಿ ಭೌತಿಕ, ಆರ್ಥಿಕ, ಶೈಕ್ಷಣಿಕ, ಆರೋಗ್ಯ, ತ್ವರಿತವಾಗಿ ಒದಗಿಸುವುದು. ನೈತಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮೂಲಭೂತ ಸೌಲಭ್ಯಗಳನ್ನು
- ತಾಂಡಾಗಳಿಗೆ ಸಂಪರ್ಕ ರಸ್ತೆ, ತಾಂಡಾಗಳಲ್ಲಿ ಸಿ.ಸಿ.ರಸ್ತೆ, ಒಳಚರಂಡಿ, ಸಮುದಾಯ ಭವನ, ಅಂಗನವಾಡಿ ಕಟ್ಟಡ, ತಾಂಡಾ ಬಡಾವಣೆ ಇತ್ಯಾದಿ ಮೂಲಭೂತ ಸೌಲಭ್ಯಯಗಳನ್ನು ಒದಗಿಸುವುದಾಗಿದೆ. ಜೊತೆಗೆ ಶುದ್ಧ ಮತ್ತು ಸುರಕ್ಷಿತ ಕುಡಿಯುವ ನೀರು, ವಿದ್ಯುಚ್ಛಕ್ತಿ, ವಸತಿ, ಸಾರಿಗೆ ಸಂಪರ್ಕ, ಸ್ವಚ್ಛತೆ ಮತ್ತು ನೈರ್ಮಲ್ಯ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಸಂಬಂಧಿಸಿದ ಇಲಾಖೆಗಳ ಸಹಯೋಗದಲ್ಲಿ ವ್ಯವಸ್ಥೆಗೊಳಿಸುವುದು.
- ಕೌಶಲ್ಯಾಭಿವೃದ್ಧಿ ತರಬೇತಿ ನೀಡುವುದರ ಮೂಲಕ ತಾಂಡಾ ನಿವಾಸಿಗಳಿಗೆ ಸ್ವಯಂ ಉದ್ಯೋಗ ಮತ್ತು ಆದಾಯ ಹೆಚ್ಚಿಸುವ ಚಟುವಟಿಕೆಗಳಲ್ಲಿ ತೊಡಗಿಸುವುದು. ವಿಶೇಷವಾಗಿ ಬಂಜಾರ ಉಡುಪು ತಯಾರಿಕ ಕೌಶಲ್ಯಕ್ಕೆ ಹೊಸ ತಂತ್ರ ಜ್ಞಾನ ಅಳವಡಿಸಿ ಉನ್ನತೀಕರಿಸುವುದರ ಮೂಲಕ ಯುವ ಬಂಜಾರ ಬಂಜಾರರನ್ನು ಸಾಂಪ್ರದಾಯಕ ಕಸೂತಿ ಕಲೆಯಲ್ಲಿ ತೊಡಗಿಸಿ ಫ್ಯಾಷನ್ ವಲಯವನ್ನು ಆಕರ್ಷಿಸುವಂತೆ ಮಾರುಕಟ್ಟೆ ಸ್ಥಾಪಿಸುವುದು.
- ತಾಂಡಾಗಳಿಗೆ ಕಾನೂನುಬದ್ಧ ಅಸ್ತಿತ್ವವನ್ನು ತಂದು ಕೊಡಲು ತಾಂಡಾ ನಿವಾಸಿಗಳು ತಲತಲಾಂತರದಿಂದ ವಾಸವಾಗಿರುವ ಸರ್ಕಾರಿ ಭೂಮಿ, ಗೋಮಾಳ, ಅರಣ್ಯ ಭೂಮಿ ಮತ್ತು ಖಾಸತಿ ಜಮೀನುಗಳಲ್ಲಿರುವ ನಿವೇಶನ/ಮನೆ ಮತ್ತು ಸಾಗುವಳಿ ಜಮೀನನ್ನು ಅವರ ಹೆಸರಿನಲ್ಲಿ ಸಕ್ರಮಗೊಳಿಸಿ ಹಕ್ಕುಪತ್ರ ಒದಗಿಸುವ ವ್ಯವಸ್ಥೆ ಮಾಡುವುದು.
- ಬಂಜಾರರ ಹಬ್ಬ ಹರಿದಿನ, ವೇಷಭೂಷಣ, ಸೇವಾಲಾಲ್ ಮಟ್, ಪದಕೋಶವನ್ನೊಳಗೊಂಡು ಬಂಜಾರ ಭಾಷೆಯ ಅಭಿವೃದ್ಧಿ, ಸಂಸ್ಕೃತಿ ಕಲೆ ಇತ್ಯಾದಿ ಕುಲಸಂಬಂಧಿ ವ್ಯವಸ್ಥೆಗಳನ್ನು ಉಳಿಸಿ-ಬೆಳೆಸಿ ಒಲಪಡಿಸುವುದು ಕುರಿತು ಸಂಶೋಧನೆ ನಡೆಸಿ ಪುನರುಜ್ಜೀವನಗೊಳಿಸಬೇಕಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದು.

ನಿಗಮದಲ್ಲಿ ಜಾರಿಯಲ್ಲಿರುವ ಯೋಜನೆಗಳು ವಿವರವನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.

5) ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ

ಸರ್ಕಾರದ ಆದೇಶ ಸಂಖ್ಯೆ: ಸಕಇ 104 ಎಸ್‌ಎಲ್‌ಪಿ 2018, ಬೆಂಗಳೂರು ದಿನಾಂಕ: 16.03.2018 ರಂದು ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮವನ್ನು ಸ್ಥಾಪನೆ ಮಾಡಲಾಗಿರುತ್ತದೆ.

ಸರ್ಕಾರದ ವಿವಿಧ ಯೋಜನೆಗಳ ಪ್ರಯೋಜನಗಳನ್ನು ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ವಿವಿಧ ಜಾತಿಗಳಿಗೆ ಸಮಾನವಾಗಿ ದೊರಕಿಸಿಕೊಟ್ಟು ಸಾಮಾಜಿಕ ನ್ಯಾಯವನ್ನು ಒದಗಿಸುವ ಉದ್ದೇಶದಿಂದ ಹಾಗೂ ಇವರುಗಳನ್ನು ಆರ್ಥಿಕವಾಗಿ ಸಬಲರನ್ನಾಗಿಸುವ ಹಿತದೃಷ್ಟಿಯಿಂದ ಈ ನಿಗಮವನ್ನು ಸ್ಥಾಪಿಸಲಾಗಿದೆ. ಈ ಕೆಳಕಂಡ ಯೋಜನೆಗಳನ್ನು ನಿಗಮದ ವತಿಯಿಂದ ಅನುಷ್ಠಾನಗೊಳಸಲಾಗುತ್ತಿದೆ.

ಕ್ರ.ಸಂ	ಯೋಜನೆಗಳು
1	ಸ್ವಯಂ ಉದ್ಯೋಗ ನೇರ ಸಾಲ ಯೋಜನೆ
2	ಉದ್ಯಮಶೀಲತಾ ಯೋಜನೆ
3	ಮೈಕ್ರೋ ಕ್ರೆಡಿಟ್ ಯೋಜನೆ
4	ಭೂ ಒಡೆತನ ಯೋಜನೆ
5	ಗಂಗಾ ಕಲ್ಯಾಣ ಯೋಜನೆ

6) ಡಾ ಬಾಬು ಜಗಜೀವನರಾಂ ಚರ್ಮ ಕೈಗಾರಿಕೆಗಳ ಅಭಿವೃದ್ಧಿ ನಿಗಮ

ಡಾ|| ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮವನ್ನು 1976 ರಲ್ಲಿ ಸ್ಥಾಪಿಸಲಾಗಿದೆ. ನಿಗಮವು ದಿನಾಂಕ: 15.12.2011 ರಿಂದ ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಪರಿಶಿಷ್ಟ ಜಾತಿಯ ಚರ್ಮ ಕುಶಲಕರ್ಮಿಗಳ ಶ್ರೇಯೋಭಿವೃದ್ಧಿಗಾಗಿ ನಿಗಮವನ್ನು ಸ್ಥಾಪಿಸಲಾಗಿದೆ. ನಿಗಮದಲ್ಲಿ ಜಾರಿಯಲ್ಲಿರುವ ಯೋಜನೆಗಳು ಕೆಳಕಂಡಂತಿರುತ್ತದೆ:

1. **ತರಬೇತಿ ಕಾರ್ಯಕ್ರಮಗಳು:**
   1. ಕೌಶಲ್ಯ ಅಭಿವೃದ್ಧಿ ತರಬೇತಿ.
   2. ಕೌಶಲ್ಯ ಉನ್ನತೀಕರಣ ಯೋಜನೆ.
2. **ಸ್ವಯಂ ಉದ್ಯೋಗ ಯೋಜನೆಗಳು:**
   1. ಸ್ವಾವಲಂಬಿ / ಸಂಚಾರಿ ಮಾರಾಟ ಮಳಿಗೆ ಯೋಜನೆ.
   2. ದುಡಿಮೆ ಬಂಡವಾಳ ಯೋಜನೆ / ಮಹಿಳಾ ಕುಶಲಕರ್ಮಿಗಳಿಗೆ ಕಾರ್ಯಸ್ಫೂರ್ತಿ ಯೋಜನೆ.
   3. "ಚರ್ಮಶಿಲ್ಪ" ಯಂತ್ರಾಧಾರಿತ ಉತ್ಪಾದನಾ ಘಟಕ ಸ್ಥಾಪಿಸುವ ಯೋಜನೆ.
   4. ನೇರಸಾಲ ಯೋಜನೆ.
   5. ಪಾದುಕೆ ಕುಟೀರ ಒದಗಿಸುವ ಯೋಜನೆ.
   6. ಮಾರುಕಟ್ಟೆ ಸಹಾಯ ಯೋಜನೆ.
3. **ಡಾ. ಬಾಬು ಜಗಜೀವನ ರಾಂ ಚರ್ಮಕಾರರ ವಸತಿ ಯೋಜನೆ.**

*****

ಅನುಬಂಧ-3

1) **ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ:**

ಕ್ರ. ಸಂ	ವರ್ಷ	ಹಂಚಿಕೆ ಮಾಡಲಾದ ಅನುದಾನ ರೂ.ಲಕ್ಷಗಳಲ್ಲಿ
1.	2018-19	ಡಾ|| ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸಲಾಗಿರುತ್ತದೆ
2	2019-20	3100.00
3	2020-21	ಅನುದಾನ ಬಿಡುಗಡೆಯಾಗಿರುವುದಿಲ್ಲ

2) **ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ:**

ವರ್ಷ	ರೂ.ಲಕ್ಷಗಳಲ್ಲಿ
2018–19	1500.00
2019–20	1256.00
2020–21	1600.00
ಒಟ್ಟು	**4356.00**

3) **ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ,**

2018–19 ಮತ್ತು 2019–20ನೇ ಸಾಲಿನ ಈ ನಿಗಮದ ಯೋಜನೆಗಳನ್ನು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸಲಾಗಿರುತ್ತದೆ. ಮಾಹಿತಿಯನ್ನು ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಒದಗಿಸಲಾಗುತ್ತದೆ. ನಿಗಮವು 2020–21 ರಿಂದ ಸ್ವತಂತ್ರವಾಗಿ ಕಾರ್ಯಾರಂಭ ಮಾಡಲಾಗಿರುತ್ತದೆ.

2020–21ನೇ ಸಾಲಿಗೆ ಭೂ ರಹಿತ ರೈತರಿಗೆ ನಿಗಮದ ವತಿಯಿಂದ ರೂ. 1021.00 ಲಕ್ಷಗಳನ್ನು ನೀಡಲಾಗಿರುತ್ತದೆ.

4) **ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮ & ಡಾ ಬಾಬು ಜಗಜೀವನರಾಂ ಚರ್ಮ ಕೈಗಾರಿಕೆಗಳ ಅಭಿವೃದ್ಧಿ ನಿಗಮಗಳಿಗೆ ಈ ಯೋಜನೆ ಇರುವುದಿಲ್ಲ.**

ಮುಂದುವರೆದಿದೆ...

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮಾಹಿತಿ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿರುವ ಕರ್ನಾಟಕ ಅಲೆಮಾರಿ ಅಭಿವೃದ್ಧಿ ಮಂಡಳಿಯು ಡಿ.ದೇವರಾಜು ಅರಸುಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಅಲೆಮಾರಿ ಜನಾಂಗದ ಅಭಿವೃದ್ಧಿಗಾಗಿ ಒದಗಿಸಿರುವ ಅನುದಾನದಲ್ಲಿ ಕಳೆದ ಮೂರು ವರ್ಷಗಳಿಂದ ಅಲೆಮಾರಿ ಜನಾಂಗದ 79 ಫಲಾನುಭವಿಗಳಿಗೆ ಭೂಮಿ ಹಂಚಿಕೆ ಮಾಡಲು ರೂ.734.28.00 ಲಕ್ಷಗಳ ಹಣ ನೀಡಲಾಗಿದೆ. ವರ್ಷವಾರು ಮಾಹಿತಿ ಈ ಕೆಳಕಂಡಂತಿದೆ.

ಕ್ರ.ಸ	ವರ್ಷ	ಫಲಾನುಭವಿಗಳ ಸಂಖ್ಯೆ	ಮೊತ್ತ (ಲಕ್ಷ ರೂ.ಗಳಲ್ಲಿ)
1.	2018-19	10	65.60
2.	2019-20	69	668.68
3.	2020-21	-	-

ಇತರೆ ನಿಗಮಗಳಲ್ಲಿ ಭೂ ರಹಿತ ರೈತರಿಗೆ ಭೂಮಿ ಹಂಚಿಕೆ ಯೋಜನೆ ಇರುವುದಿಲ್ಲ

******

ADC

8

ಅನುಬಂಧ-03

ಡಾ:ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

ಶ್ರೀ ಕೆ.ಟಿ ಶ್ರೀ ಕಂಠೇಗೌಡ(ಪದವೀಧರರ) ಕ್ಷೇತ್ರ ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:349(431) ಕ್ಕೇ ಉತ್ತರ ಕಳೆದು ಮೂರು ವರ್ಷಗಳಿಂದ ಭೂ ಒಡೆತನ ಯೋಜನೆಗಾಗಿ ಭೂ ರಹಿತ ರೈತರಿಗೆ ಭೂಮಿ ಹಂಚಿಕೆ ಮಾಡಲು ಖರ್ಚು ಮಾಡಿರುವ ವಿವರ

(ರೂ.ಲಕ್ಷಗಳಲ್ಲಿ)

ಕ್ರ.ಸಂ	ಜಿಲ್ಲೆಯ ಹೆಸರು	2018-19	2019-20	2020-21
		ಭೂ ರಹಿತ ರೈತರಿಗೆ ಜಮೀನು ಹಂಚಿಕೆ ಮಾಡಲು ಖರ್ಚು ಮಾಡಲಾದ ಮೊತ್ತ	ಭೂ ರಹಿತ ರೈತರಿಗೆ ಜಮೀನು ಹಂಚಿಕೆ ಮಾಡಲು ಖರ್ಚು ಮಾಡಲಾದ ಮೊತ್ತ	ಭೂ ರಹಿತ ರೈತರಿಗೆ ಜಮೀನು ಹಂಚಿಕೆ ಮಾಡಲು ಖರ್ಚು ಮಾಡಲಾದ ಮೊತ್ತ
1	ಬೆಂಗಳೂರು ನಗರ	0.00	40.00	40.00
2	ಬೆಂಗಳೂರು (ಗ್ರಾ)	0.00	0.00	0.00
3	ಚಿತ್ರದುರ್ಗ	0.00	55.12	241.98
4	ಚಿಕ್ಕಬಳ್ಳಾಪುರ	0.00	58.00	0.00
5	ಕೋಲಾರ	0.00	119.26	0.00
6	ದಾವಣಗೆರೆ	0.00	0.00	7.50
7	ರಾಮನಗರ	0.00	0.00	67.36
8	ಶಿವಮೊಗ್ಗ	9.66	0.00	0.00
9	ತುಮಕೂರು	0.00	111.56	30.88
10	ಚಾಮರಾಜನಗರ	36.00	134.80	54.38
11	ಚಿಕ್ಕಮಗಳೂರು	0.00	39.28	34.34
12	ದಕ್ಷಿಣ ಕನ್ನಡ	0.00	0.00	0.00
13	ಹಾಸನ	0.00	0.00	87.88
14	ಕೊಡಗು	0.00	0.00	0.00
15	ಮಂಡ್ಯ	113.26	101.46	151.82
16	ಮೈಸೂರು	0.00	280.58	371.72
17	ಉಡುಪಿ	0.00	0.00	0.00
18	ಬಾಗಲಕೋಟೆ	406.52	7837.64	4911.28
19	ಬೆಳಗಾವಿ	424.16	1308.18	1796.08
20	ವಿಜಯಪುರ	22.50	1907.36	1503.04
21	ಧಾರವಾಡ	38.16	333.70	5.48
22	ಗದಗ	28.88	252.16	466.36
23	ಹಾವೇರಿ	9.78	37.94	20.54
24	ಉತ್ತರ ಕನ್ನಡ	0.00	0.00	0.00
25	ಬಳ್ಳಾರಿ	8.40	804.60	54.60
26	ಬೀದರ್	8.24	0.00	153.36
27	ಕಲಬುರಗಿ	385.34	1214.28	4361.94
28	ಕೊಪ್ಪಳ	5.18	0.00	220.16
29	ರಾಯಚೂರು	62.38	1978.70	6523.30
30	ಯಾದಗಿರಿ	1657.90	171.34	4354.14
ಒಟ್ಟು		**3216.36**	**16785.96**	**25458.14**

ಅನುಬಂಧ-04

ಡಾ:ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು

ಶ್ರೀ ಕೆ.ಟಿ ಶ್ರೀ ಕಂಠೇಗೌಡ(ಪದವೀಧರರ) ಕ್ಷೇತ್ರ ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:349(431) ಕ್ಕೇ ಉತ್ತರ

ಕಳೆದು ಮೂರು ವರ್ಗಳಿಂದ ಭೂ ಒಡೆತನ ಯೋಜನೆಯಡಿ ಮೈಸೂರು, ಮಂಡ್ಯ ಮತ್ತು ತುಮಕೂರು ಜಿಲ್ಲೆಗಳಲ್ಲಿ ಭೂರಹಿತ ರೈತರಿಗೆ ಭೂಮಿ ನೀಡಲಾಗಿರುವ ವಿವರಗಳು

ಕ್ರ.ಸಂ	ಫಲಾನುಭವಿಯ ಹೆಸರು ಮತ್ತು ವಿಳಾಸ/ ಶ್ರೀಮತಿ	ಪ:ಜಾತಿ	ಜಮೀನಿನ ವಿಸ್ತೀರ್ಣ (ಎಕರೆಗಳಲ್ಲಿ)		ಮೊತ್ತ (ರೂ.ಲಕ್ಷಗಳಲ್ಲಿ)	
			ಖುಷ್ಕಿ	ತರಿ/ ಭಾಗಾಯ್ತು	ಸಹಾಯಧನ	ಅವಧಿಸಾಲ
			2018-19			
ಮಂಡ್ಯ ಜಿಲ್ಲೆ :-						
1	ಶ್ರೀಮತಿ ಚಿಕ್ಕತಾಯಮ್ಮ ಕೋಂ ಶಿವಣ್ಣ, ಅರಕೆರೆ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.	ಪ:ಜಾತಿ ಆ.ಕ	0.27	0.00	506250	506250
2	ಶ್ರೀಮತಿ ಪುಟ್ಟಮ್ಮ ಕೋಂ ಚಿಕ್ಕಭೈರಯ್ಯ, ಅರಕೆರೆ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.	ಪ:ಜಾತಿ ಆ.ಕ	0.25	0.00	468750	468750
3	ಶ್ರೀಮತಿ ಆಶಾ ಕೋಂ ಮಲ್ಲೇಶ, ಅರಕೆರೆ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.	ಪ:ಜಾತಿ ಆ.ಕ	0.35	0.00	656250	656250
4	ಶ್ರೀಮತಿ ಕನಕ ಕೋಂ ಮಹದೇವ, ಅರಕೆರೆ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ	ಪ:ಜಾತಿ ಆ.ಕ	0.30	0.00	562500	562500
5	ಶ್ರೀಮತಿ ಜಯಮ್ಮ ಕೋಂ ನಿಂಗಯ್ಯ, ಅರಕೆರೆ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.	ಪ:ಜಾತಿ ಆ.ಕ	0.20	0.00	375000	375000
6	ಶ್ರೀಮತಿ ಎಂ.ಪಿ ವಿಜಯಲಕ್ಷ್ಮೀ ಕೋಂ ಸೋಮಶೇಖರ್, ಅರಕೆರೆ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.	ಪ:ಜಾತಿ ಆ.ಕ	0.33	0.00	618750	618750
7	ಶ್ರೀಮತಿ ರಾಣಿ ಕೋಂ ಬಸವರಾಜು, ಅರಕೆರೆ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.	ಪ:ಜಾತಿ ಆ.ಕ	0.32	0.00	600000	600000
8	ಶ್ರೀಮತಿ ನಾಗಮ್ಮ ಬಿನ್ ಮಹದೇವು ಅರಕೆರೆ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.	ಪ:ಜಾತಿ ಆ.ಕ	0.20	0.00	375000	375000
9	ಶ್ರೀಮತಿ ಭಾರತಿ ಡಿ.ಎಮ್ ಕೋಂ ದೇಶಿಲಿಂಗು ವಿ.ಎಮ್ ವಡಿಯಾಂಡಳ್ಳಿ, ಅರಕೆರೆ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.	ಪ:ಜಾತಿ ಆ.ಕ	1.00	0.00	750000	750000
10	ಶ್ರೀಮತಿ ಲಕ್ಷ್ಮಮ್ಮ ಕೋಂ ಲೇ.ಚಿಕ್ಕರಸಯ್ಯ, ಅರಕೆರೆ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ	ಪ:ಜಾತಿ ಆ.ಕ	0.20	0.00	375000	375000
11	ಶ್ರೀಮತಿ ಚಿಕ್ಕತಾಯಮ್ಮ ಕೋಂ ನಾಗರಾಜು ವಡಿಯಾಂಡಳ್ಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.	ಪ:ಜಾತಿ ಆ.ಕ	0.20	0.00	375000	375000
ತುಮಕೂರು ಜಿಲ್ಲೆ						
12	ಶ್ರೀಮತಿ ಶಿವಲಿಂಗಮ್ಮ ಕೋಂ ಶಿವಕುಮಾರ್, ಗುಮ್ಮಘಟ್ಟ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ	ಪ:ಜಾತಿ ಆ.ಕ	2.05	0.00	318750	318750
13	ಶ್ರೀಮತಿ ಅಶ್ವತ್ಥಮ್ಮ ಕೋಂ ಲಕ್ಷ್ಮೀನರಸಪ್ಪ, ಗುಮ್ಮಘಟ್ಟ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ	ಪ:ಜಾತಿ ಆ.ಕ	2.05	0.00	318750	318750
14	ಶ್ರೀಮತಿ ಆದಿಲಕ್ಷ್ಮಮ್ಮ ಕೋಂ ಹನುಮಂತಪ್ಪ, ಗುಮ್ಮಘಟ್ಟ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ	ಪ:ಜಾತಿ ಆ.ಕ	2.05	0.00	318750	318750
15	ಶ್ರೀಮತಿ ಪದ್ಮಾವತಿ ಕೋಂ ನಾಗಭೂಷಣ, ಗುಮ್ಮಘಟ್ಟ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ	ಪ:ಜಾತಿ ಆ.ಕ	2.05	0.00	318750	318750
16	ಶ್ರೀಮತಿ ಗಂಗಮ್ಮ ಕೋಂ ರಾಮಕೃಷ್ಣಪ್ಪ, ಅಕ್ಕಮ್ಮನಹಳ್ಳಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ	ಪ:ಜಾತಿ ಆ.ಕ	2.05	0.00	318750	318750
17	ಶ್ರೀಮತಿ ಶಾಂತಮ್ಮ ಕೋಂ ಪೆದ್ದನ್ನ, ವೆಂಕಟಮ್ಮನಹಳ್ಳಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ.	ಪ:ಜಾತಿ ಆ.ಕ	2.00	0.00	600000	600000
18	ಶ್ರೀಮತಿ ಸುಧಾ ಕೋಂ ನಾಗರಾಜು. ಪಿ. ವೆಂಕಟಮ್ಮನಹಳ್ಳಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ.	ಪ:ಜಾತಿ ಆ.ಕ	2.00	0.00	600000	600000
19	ಶ್ರೀಮತಿ ನಾಗಲಕ್ಷ್ಮೀ ಕೋಂ ಮುತ್ಯಾಲು, ವೆಂಕಟಮ್ಮನಹಳ್ಳಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ.	ಪ:ಜಾತಿ ಆ.ಕ	2.00	0.00	600000	600000
20	ಶ್ರೀಮತಿ ಗೌರಮ್ಮ ಕೋಂ ಬಾವಯ್ಯ ವೆಂಕಟಮ್ಮನಹಳ್ಳಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ.	ಪ:ಜಾತಿ ಆ.ಕ	1.20	0.00	450000	450000

2019-20

ಮಂಡ್ಯ ಜಿಲ್ಲೆ

21	ಶ್ರೀಮತಿ. ನಾಗಮಣಿ ಕೋಂ ವಿ.ಎಂ.ಸುರೇಶ್, ವಡಿಯಾಂಡಹಳ್ಳಿ, ಶ್ರೀರಂಗಪಟ್ಟಣ್ಣ ತಾ: ಮಂಡ್ಯಜಿಲ್ಲೆ	ಪ:ಜಾತಿ ಆ.ಕ	0.00	1.00	750000	750000
22	ಶ್ರೀಮತಿ. ಸವಿತಾ ಕೋಂ ಚಂಗುಮಣಿ, ಅರಕೆರೆ, ಶ್ರೀರಂಗಪಟ್ಟಣ ತಾ: ಮಂಡ್ಯಜಿಲ್ಲೆ	ಪ:ಜಾತಿ ಮಾದಿಗ	0.00	1.00	750000	750000
23	ಶ್ರೀಮತಿ. ಸರೋಜಮ್ಮ ಕೋಂ ನಾಗಯ್ಯ.ಅರಕೆರೆ, ಶ್ರೀರಂಗಪಟ್ಟಣ ತಾ: ಮಂಡ್ಯಜಿಲ್ಲೆ	ಪ:ಜಾತಿ ಮಾದಿಗ	0.00	0.38 1/2	721875	721875
24	ಶ್ರೀಮತಿ. ಭಾಗ್ಯಮ್ಮ ಕೋಂ ನಾಗರಾಜು, ಅರಕೆರೆಗ್ರಾಮ, ಶ್ರೀರಂಗಪಟ್ಟಣ, ತಾಲ್ಲೂಕು, ಮಂಡ್ಯಜಿಲ್ಲೆ	ಪ:ಜಾತಿ ಆ.ಕ	0.00	0.21	393750	393750
25	ಶ್ರೀಮತಿ. ರೇಣುಕಾ ಕೋಂ ರಮೇಶ್.ವಡಿಯಾಂಡಹಳ್ಳಿ ಗ್ರಾಮಅರಕೆರೆ ಹೋಬಳಿ ಶ್ರೀರಂಗಪಟ್ಟಣ ತಾ: ಮಂಡ್ಯಜಿಲ್ಲೆ	ಪ:ಜಾತಿ ಮಾದಿಗ	0.00	0.37	693750	693750
26	ಶ್ರೀಮತಿ. ಎಂ.ಪಿ.ವಿಜಯಲಕ್ಷ್ಮಿ ಕೋಂ ಸೋಮಶೇಖರ್, ಗ್ರಾಮಅರಕೆರೆ ಹೋಬಳಿ ಶ್ರೀರಂಗಪಟ್ಟಣ ತಾ: ಮಂಡ್ಯಜಿಲ್ಲೆ	ಪ:ಜಾತಿ ಮಾದಿಗ	0.00	0.3	562500	562500
27	ಶ್ರೀಮತಿ. ಮಹದೇವಮ್ಮ ಕೋಂ ನೀಲಯ್ಯ, ಅರಕೆರೆ, ಶ್ರೀರಂಗಪಟ್ಟಣ ತಾ: ಮಂಡ್ಯಜಿಲ್ಲೆ	ಪ:ಜಾತಿ ಮಾದಿಗ	0.00	0.31	581250	581250
28	ಶ್ರೀಮತಿ.ರಾಣಿ ಕೋಂ ಬಸವರಾಜು, ಅರಕೆರೆಗ್ರಾಮ& ಹೋಬಳಿ, ಶ್ರೀರಂಗಪಟ್ಟಣ ತಾ: ಮಂಡ್ಯಜಿಲ್ಲೆ	ಪ:ಜಾತಿ ಮಾದಿಗ	0.00	0.33	618750	618750

ಮೈಸೂರು ಜಿಲ್ಲೆ

29	ಶ್ರೀಮತಿ ಎಂ.ಪಿ.ಗೀತಾ ಕೋಂ ಎಸ್. ಕಾಂತರಾಜು, ಸೋಸಲೆ, ಟಿ.ನರಸೀಪುರ ತಾಲ್ಲೂಕು, ಜಿಲ್ಲೆ॥ಮೈಸೂರು.	ಪ:ಜಾತಿ ಎ.ಕೆ	0.31	0.00	426250	426250
30	ಶ್ರೀಮತಿ ಮೀನಾಕ್ಷಿ ಕೋಂ ಅಂದಾನಿ, ತಾ॥ತುಂಬಲ, ತಾ॥ಟಿ.ನರಸೀಪುರ, ಮೈಸೂರು ಜಿಲ್ಲೆ.	ಪ:ಜಾತಿ ಎ.ಕೆ	2.00	0.00	675000	675000
31	ಶ್ರೀಮತಿ. ಸವಿತ ಬಿ ಕೋಂ ಎಸ್. ಕುಮಾರ್. ಹ್ಯಾಕನೂರು, ಟಿ.ನರಸೀಪುರ ತಾಲ್ಲೂಕು ಮೈಸೂರುಜಿಲ್ಲೆ	ಪ:ಜಾತಿ ಎ.ಕೆ	0.00	1.10	468750	468750
32	ಶ್ರೀಮತಿ. ಗುರುಸಿದ್ದಮ್ಮ ಕೋಂ ಸಿದ್ದಯ್ಯ, ತಗಡೂರುಗ್ರಾಮ, ನಂಜನಗೂಡುತಾಲ್ಲೂಕು ಮೈಸೂರುಜಿಲ್ಲೆ	ಪ:ಜಾತಿ ಆ.ಕ	0.00	1.36	750000	750000
33	ಶ್ರೀಮತಿ. ರೂಪ ಕೋಂ ನಾಗಣ್ಣ, ಜಾಲಹಳ್ಳಿ, ನಂಜನಗೂಡು, ತಾ:ಮೈಸೂರುಜಿಲ್ಲೆ	ಪ:ಜಾತಿ ಮಾದಿಗ	2.03	0.00	674375	674375
34	ಶ್ರೀಮತಿ. ಗೀತಾ ಕೋಂ ಮಹದೇವ ಡಿ ಎಂ.ಕೆಬ್ಬೆ-ಹುಂಡಿಗ್ರಾಮ.& ಅಂಚೆ, ಸೋಸಲೆ ಹೋ: ತಿ.ನರಸೀಪುರ ತಾ: ಮೈಸೂರುಜಿಲ್ಲೆ	ಪ:ಜಾತಿ ಆ.ಕ	0.00	1.00	400000	400000
35	ಪ್ರೇಮ ಕೋಂ ಶಂಕರ್.ಎಂ.ಕೆಬ್ಬೆ-ಹುಂಡಿಗ್ರಾಮ.& ಅಂಚೆ, ಸೋಸಲೆ ಹೋ: ತಿ.ನರಸೀಪುರ ತಾ: ಮೈಸೂರುಜಿಲ್ಲೆ	ಪ:ಜಾತಿ ಆ.ಕ	0.00	1.00	400000	400000
36	ಶ್ರೀಮತಿ.ಸುಮಿತ್ರ ಕೋಂ ಹೆಚ್.ಜೆ.ಸುರೇಶ, ಹಂಚೀಪುರ, ಹೆಚ್.ಡಿ.ಕೋಟೆತಾಲ್ಲೂಕು ಮೈಸೂರುಜಿಲ್ಲೆ	ಪ:ಜಾತಿ ಆ.ಕ	0.00	2.00	550000	550000
37	ಶ್ರೀಮತಿ.ಸಾಕಮ್ಮ ಕೋಂ ನಿಜ. ಹಂಚೀಪುರ, ಹೆಚ್.ಡಿ.ಕೋಟೆತಾಲ್ಲೂಕು ಮೈಸೂರುಜಿಲ್ಲೆ	ಪ:ಜಾತಿ ಆ.ಕ	0.00	2.00	550000	550000
38	ಹಂಚೀಪುರ, ಹೆಚ್.ಡಿ.ಕೋಟೆತಾಲ್ಲೂಕು ಮೈಸೂರುಜಿಲ್ಲೆ	ಪ:ಜಾತಿ ಆ.ಕ	0.00	2.00	550000	550000
39	ಶ್ರೀಮತಿ.ಶೋಭಾ ಕೋಂ ನಾಗರಾಜು ಹಂಚೀಪುರ, ಹೆಚ್.ಡಿ.ಕೋಟೆತಾಲ್ಲೂಕು ಮೈಸೂರುಜಿಲ್ಲೆ	ಪ:ಜಾತಿ ಆ.ಕ	0.00	2.00	550000	550000
40	ಶ್ರೀಮತಿ.ಮುದ್ದುಮಲ್ಲಮ್ಮ ಕೋಂ ರಾಚಯ್ಯ, ಹಂಚೀಪುರ, ಹೆಚ್.ಡಿ.ಕೋಟೆತಾಲ್ಲೂಕು ಮೈಸೂರು ಜಿಲ್ಲೆ	ಪ:ಜಾತಿ ಆ.ಕ	0.00	2.00	550000	550000
41	ಶ್ರೀಮತಿ.ಕಲಾ ಕೋಂ ಮಹೇಶ.ಹಂಚೀಪುರ, ಹೆಚ್.ಡಿ.ಕೋಟೆತಾಲ್ಲೂಕು ಮೈಸೂರುಜಿಲ್ಲೆ	ಪ:ಜಾತಿ ಆ.ಕ	0.00	2.00	550000	550000
42	ಶ್ರೀಮತಿ.ಶಿವಮ್ಮ ಕೋಂ ನಾಗರಾಜು. ಶಾಂತಿಪುರ. ಕೊತ್ತೆಗಾಲ ಅಂಚೆ,ಸರಗೂರು ಹೋಬಳಿ, ಹೆಚ್.ಡಿ.ಕೋಟೆತಾಲೂಕು ಮೈಸೂರುಜಿಲೆ	ಪ:ಜಾತಿ ಆ.ಕ	0.00	1.07	646250	646250

ತುಮಕೂರು ಜಿಲ್ಲೆ

43	ಶ್ರೀಮತಿ.ಭಾಗ್ಯಮ್ಮ ಕೋಂ ಸಣ್ಣತಿಮ್ಮಪ್ಪ, ಮಂಗಳವಾಡ ಗ್ರಾಮ, ಪಾವಗಡತಾ: ತುಮಕೂರು ಜಿ:	ಪ:ಜಾತಿ ಆ.ಕ	2.15	0.00	475000	475000
44	ಶ್ರೀಮತಿ.ಪುಟ್ಟನರಸಮ್ಮ ಕೊಂ ಶಿವಣ್ಣ, ಮಂಗಳವಾಡ ಗ್ರಾಮ, ಪಾವಗಡತಾ: ತುಮಕೂರು ಜಿ:	ಪ:ಜಾತಿ ಆ.ಕ	2.14	0.00	470000	470000

45	ಶ್ರೀಮತಿ.ದುರ್ಗಮ್ಮ ಕೋಂ ಬೆಟ್ಟದತಿಮ್ಮಪ್ಪ, ಮಂಗಳವಾಡ ಗ್ರಾಮ, ಪಾವಗಡತಾ: ತುಮಕೂರು ಜಿ:	ಪ:ಜಾತಿ ಆ.ಕ	2.14	0.00	470000	470000
46	ಶ್ರೀಮತಿ.ಮಂಜುಳ ಎನ್ ಕೋಂ ಬಿ.ಆರ್.ಜಯಪ್ಪ, ಬೈರಾಪುರತಾಂಡ, ಮಧುಗಿರಿತಾ: ತುಮಕೂರುಜಿಲ್ಲೆ	ಪ:ಜಾತಿ ಲಂಬಾಣಿ	1.20	0.00	750000	750000
	2020-21					
	ಮಂಡ್ಯ:					
47	ಶ್ರೀಮತಿ.ಅಮ್ಮಣ್ಣಿ ಕೋಂ ಸಿದ್ದಲಿಂಗಮೂರ್ತಿ ಕೆ.ಜಿ, ಕೊನ್ನಾಪುರ, ಮಳವಳ್ಳಿ ತಾ: ಮಂಡ್ಯ ಜಿಲ್ಲೆ.	ಪ.ಜಾ/ಆ.ಕ	0.00	1.10	750000	750000
48	ಶ್ರೀಮತಿ.ಪುಟ್ಟಮ್ಮ ಕೋಂ ಪಾಲನೇತ್ರ, ಬೇವುಕಲ್ಲು, ದುದ್ದ ಹೋಬಳಿ, ಮಂಡ್ಯ ತಾ&ಜಿಲ್ಲೆ.	ಪ.ಜಾ/ಆ.ಕ	0.00	1.07	352500	352500
49	ಶ್ರೀಮತಿ.ಗೀತಾ ಎನ್ ಕೋಂ ಶಿವಪ್ರಸಾದ್, ಹಲಗೂರು ಗ್ರಾಮ & ಹೋಬಳಿ, ಮಳವಳ್ಳಿ ತಾ: ಮಂಡ್ಯ ಜಿಲ್ಲೆ.	ಪ.ಜಾ/ಆ.ಕ	0.00	101. 1/2	622500	622500
50	ಶ್ರೀಮತಿ.ಡಿ.ಸಿ.ಭವ್ಯ ಕೋಂ ಗಿರೀಶ್ ಎಂ, ನಿಟ್ಟೂರು, ಹಲಗೂರು ಹೋಬಳಿ, ಮಳ್ಳವಳ್ಳಿ ತಾ: ಮಂಡ್ಯ ಜಿಲ್ಲೆ.	ಪ.ಜಾ/ಆ.ಕ	1.20	0.00	562500	562500
51	ಶ್ರೀಮತಿ.ಗೌರಮ್ಮ ಕೋಂ ಮಾದಯ್ಯ, ತೊರೆಕಾಡನಹಳ್ಳಿ, ಹಲಗೂರು ಹೋಬಳಿ, ಮಳವಳ್ಳಿ ತಾ: ಮಂಡ್ಯ ಜಿಲ್ಲೆ.	ಪ.ಜಾ/ಆ.ಕ	0.00	1.10	750000	750000
52	ಶ್ರೀಮತಿ.ನಿಂಗಮ್ಮ ಕೋಂ ಬೋರಯ್ಯ, ಹೊಸಪುರ, ಕಸಬಾ ಹೋಬಳಿ, ಮಳವಳ್ಳಿ ತಾ: ಮಂಡ್ಯ ಜಿಲ್ಲೆ.	ಪ.ಜಾ/ಆ.ಕ	0.00	1.03	645000	645000
53	ಶ್ರೀಮತಿ.ಕುಂದೂರಮ್ಮ ಕೋಂ ಲೇ.ಸಿದ್ದಯ್ಯ, ಅಂತರವಳ್ಳಿ, ಕಸಬಾ ಹೋಬಳಿ, ಮಳವಳ್ಳಿ ತಾ: ಮಂಡ್ಯ ಜಿಲ್ಲೆ.	ಪ.ಜಾ/ಎ.ಕೆ.	0.00	0.39	585000	585000
54	ಶ್ರೀಮತಿ.ಸಿದ್ದರಾಜಮ್ಮ ಕೋಂ ಸಿದ್ದರಾಜು ಟಿ.ಎಸ್ತೊರೆಕಾಡನಹಳ್ಳಿ, ಹಲಗೂರು ಹೋಬಳಿ, ಮಳವಳ್ಳಿ ತಾ: ಮಂಡ್ಯ ಜಿಲ್ಲೆ.	ಪ.ಜಾ/ಎ.ಕೆ.	0.00	1.00	600000	600000
55	ಶ್ರೀಮತಿ.ಪಳನಿಯಮ್ಮ ಕೋಂ ಬಣ್ಣಯ್ಯ ಮೋಳೆಕೊಪ್ಪಲು, ಕೊತ್ತತ್ತಿ ಹೋಬಳಿ, ಮಂಡ್ಯ ತಾಲ್ಲೂಕು & ಜಿಲ್ಲೆ.	ಪ.ಜಾ ಎ.ಡಿ	0.00	1.00	750,000	750,000
56	ಶ್ರೀಮತಿ.ಜಯಮ್ಮ ಕೋಂ ಜವರಯ್ಯ, ವಡಿಯಾಂಡಹಳ್ಳಿ, ಅರಕೆರೆ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು ಮಂಡ್ಯ ಜಿಲ್ಲೆ.	ಪ.ಜಾ/ಎ.ಕೆ.	0.00	0.27	506250	506250
57	ಶ್ರೀಮತಿ.ಪುಷ್ಪಲತಾ ಕೋಂ ಚನ್ನಬೋರಯ್ಯಗೊಬ್ಬರಗಾಲ ಅರಕೆರೆ ಹೋಬಳಿ, ಶ್ರೀರಂಗಪಟ್ಟಣ ತಾಲ್ಲೂಕು, ಮಂಡ್ಯ ಜಿಲ್ಲೆ.	ಪ.ಜಾ/ಎ.ಕೆ.	0.00	0.20	375000	375000
58	ಶ್ರೀಮತಿ.ಅಲಮೇಲಮ್ಮ ಗಂಡ ಸೋಮು ಕಳ್ಳಮೆಳೆದೊಡ್ಡಿ ಸಿ.ಎ ಕೆರೆ ಹೋಬಳಿ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.	ಪ.ಜಾ ಎ.ಕೆ	0.00	1.00	468000	468000
59	ಶ್ರೀಮತಿ.ಸಿ.ಕೆ.ಪ್ರಮೀಳ ಕೋಂ ಮಹದೇವಸ್ವಾಮಿ ಎಂ ನಿಟ್ಟೂರು, ಹಲಗೂರು ಹೋಬಳಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ.	ಪ.ಜಾ ಎ.ಕೆ	0.00	1.01 1/2	622500	622500
	ಮೈಸೂರು ಜಿಲ್ಲೆ					
60	ಶ್ರೀಮತಿ.ಮೀನಾಕ್ಷಿ ಕೋಂ ಪುಟ್ಟಹನುಮಯ್ಯ ಎಸ್.ಡಿ.3ನೇ ವಾರ್ಡ್,ಬಾಬುಜಗಜೀವನರಾಂ ಬೀದಿ, ಸರಗೂರು ಹೋಬಳಿ, ಹೆಚ್.ಡಿ.ಕೋಟೆತಾಲ್ಲೂಕು ಮೈಸೂರುಜಿಲ್ಲೆ	ಪ:ಜಾತಿ ಆ.ದ್ರಾ	2.00	2.00	747500	747500
61	ಶ್ರೀಮತಿ.ಮೀನಾಕ್ಷಿ ಕೋಂ ಗೋಪಾಲರಾಜು, ಶಾಂತಿಪುರ, ಕೊತ್ತೆಗಾಲ ಅಂಚೆ,ಸರಗೂರು ಹೋಬಳಿ, ಹೆಚ್.ಡಿ.ಕೋಟೆತಾಲ್ಲೂಕು ಮೈಸೂರುಜಿಲ್ಲೆ	ಪ:ಜಾತಿ ಆ.ಕ	0.00	1.01	563750	563750
62	ಶ್ರೀಮತಿ.ತೊಳಸಮ್ಮ ಕೋಂ ಶಂಕರ ಕುಪ್ಪರವಳ್ಳಿ, ಬಿಳಿಗೆರೆ ಹೋಬಳಿ, ನಂಜನಗೂಡುತಾಲ್ಲೂಕು, ಮೈಸೂರುಜಿಲ್ಲೆ.	ಪ:ಜಾತಿ ಮಾದಿಗ	0.00	1.00	700000	700000
63	ಶ್ರೀಮತಿ.ಎಸ್.ಶಿಲ್ಪ ಕೋಂ ಬಸವರಾಜು, ಕುಪ್ಪರವಳ್ಳಿ, ಬಿಳಿಗೆರೆ ಹೋಬಳಿ, ನಂಜನಗೂಡುತಾಲ್ಲೂಕು, ಮೈಸೂರುಜಿಲ್ಲೆ.	ಪ:ಜಾತಿ ಮಾದಿಗ	0.00	0.20	350000	350000
64	ಶ್ರೀಮತಿ.ಮಹಾಲಕ್ಷ್ಮಿ ಆರ್ ಕೋಂ ಮಹದೇವ, ಕುಪ್ಪರವಳ್ಳಿ, ಬಿಳಿಗೆರೆ ಹೋಬಳಿ, ನಂಜನಗೂಡುತಾಲ್ಲೂಕು, ಮೈಸೂರುಜಿಲ್ಲೆ.	ಪ:ಜಾತಿ ಮಾದಿಗ	0.00	0.21	367500	367500
65	ಶ್ರೀಮತಿ.ಪುಟ್ಟಮ್ಮ ಕೋಂ ಸಣ್ಣಮಹದೇವ, ದೇವರಸಹಳ್ಳಿ, ಕಸಬಾ ಹೋ: ನಂಜನಗೂಡು ತಾ: ಮೈಸೂರು ಜಿಲ್ಲೆ	ಪ.ಜಾತಿ / ಎ.ಕೆ.	0.00	0.39	682500	682500

66	ಶ್ರೀಮತಿ.ನಂದಿನಿ ಕೋಂ ರಾಜು ದೇವರಸಹಳ್ಳಿ, ಕಸಬಾ ಹೋ ನಂಜನಗೂಡುತಾ: ಮೈಸೂರುಜಿಲ್ಲೆ	ಪ.ಜಾತಿ / ಎ.ಕೆ.	0.00	0.39	682500	682500
67	ಶ್ರೀಮತಿ.ಮಂದಾರ ಕೋಂ ನಾಗರಾಜು ಡಿ.ಎನ್. ದುಗ್ಗಹಳ್ಳಿ, ಹುಲ್ಲಹಳ್ಳಿ ಹೋಬಳಿ, ನಂಜನಗೂಡು ತಾ: ಮೈಸೂರು ಜಿಲ್ಲೆ.	ಪ.ಜಾತಿ / ಎ.ಕೆ.	0.00	0.00	625000	625000
68	ಶ್ರೀಮತಿ.ಪಾರ್ವತಮ್ಮ ಕೋಂ ರಾಮು, ಕಾಡವಡ್ಡರಗುಡಿ, ಬಿಳಿಕೆರೆ ಹೋಬಳಿ, ಹುಣಸೂರು ತಾ: ಮೈಸೂರು ಜಿಲ್ಲೆ.	ಪ.ಜಾ/ಕೊರಮ	0.00	1.00	725000	725000
69	ಶ್ರೀಮತಿ.ರುಕ್ಮಿಣಿ ಕೋಂ ಕುಮಾರ, ಕಾಡವಡ್ಡರಗುಡಿ, ಬಿಳಿಕೆರೆ ಹೋಬಳಿ, ಹುಣಸೂರು ತಾ: ಮೈಸೂರು ಜಿಲ್ಲೆ.	ಪ.ಜಾ/ಕೊರಮ	0.00	0.36	652500	652500
70	ಶ್ರೀಮತಿ.ಲಕ್ಷ್ಮಿ ಕೋಂ ಕುಮಾರ, ಕಾಡವಡ್ಡರಗುಡಿ, ಬಿಳಿಕೆರೆ ಹೋಬಳಿ, ಹುಣಸೂರು ತಾ: ಮೈಸೂರು ಜಿಲ್ಲೆ.	ಪ.ಜಾ/ಕೊರಮ	0.00	0.37	670625	670625
71	ಶ್ರೀಮತಿ.ಪುಷ್ಪ ಕೋಂ ಶಿವಣ್ಣ, ಕಾಡವಡ್ಡರಗುಡಿ, ಬಿಳಿಕೆರೆ ಹೋಬಳಿ, ಹುಣಸೂರು ತಾ: ಮೈಸೂರು ಜಿಲ್ಲೆ.	ಪ.ಜಾ/ಕೊರಮ	0.00	0.38	688750	688750
72	ಶ್ರೀಮತಿ.ಕುಮಾರಿ ಕೋಂ ವೆಂಕಟೇಶ್, ಕಾಡವಡ್ಡರಗುಡಿ, ಬಿಳಿಕೆರೆ ಹೋಬಳಿ, ಹುಣಸೂರು ತಾ: ಮೈಸೂರು ಜಿಲ್ಲೆ.	ಪ.ಜಾ/ಕೊರಮ	0.00	0.39	706875	706875
73	ಶ್ರೀಮತಿ.ಮಹದೇವಿ ಕೋಂ ಗಿರೀಶ ಸಿ.ಎಂ, ಕಾಡವಡ್ಡರಗುಡಿ, ಬಿಳಿಕೆರೆ ಹೋಬಳಿ, ಹುಣಸೂರು ತಾ: ಮೈಸೂರು ಜಿಲ್ಲೆ.	ಪ.ಜಾ/ಕೊರಮ	0.00	0.33	598125	598125
74	ಶ್ರೀಮತಿ.ನಮ್ರತೇಶ್ವರಿ ಕೆ.ಆರ್. ಕೋಂ ರಘು, ಕಾಡವಡ್ಡರಗುಡಿ, ಬಿಳಿಕೆರೆ ಹೋಬಳಿ, ಹುಣಸೂರು ತಾ: ಮೈಸೂರು ಜಿಲ್ಲೆ.	ಪ.ಜಾ/ಕೊರಮ	0.00	0.33	598125	598125
75	ಶ್ರೀಮತಿ.ಲತಾ ಕೋಂ ಶಿವಪ್ಪ, ಕಂದೇಗಾಲ, ಹುಲ್ಲಹಳ್ಳಿ ಹೋಬಳಿ,ನಂಜನಗೂಡು ತಾ: ಮೈಸೂರು ಜಿಲ್ಲೆ.	ಪ.ಜಾ/ಎ.ಕೆ.	0.00	1.00	325000	325000
76	ಶ್ರೀಮತಿ.ಮಣಿ ಕೋಂ ಜಗದೀಶ್.ಸಿ. ಕಂದೇಗಾಲ, ಹುಲ್ಲಹಳ್ಳಿ ಹೋಬಳಿ,ನಂಜನಗೂಡು ತಾ: ಮೈಸೂರು ಜಿಲ್ಲೆ.	ಪ.ಜಾ/ಎ.ಕೆ.	0.00	1.00	325000	325000
77	ಶ್ರೀಮತಿ.ಜ್ಯೋತಿ ಎಸ್ ಕೋಂ ವರಸಿಂಗಯ್ಯ, ಕೆ.ಬೆಳ್ತೂರು, ಸರಗೂರು ಹೋಬಳಿ, ಹೆಚ್.ಡಿ.ಕೋಟೆ ತಾ: ಮೈಸೂರು ಜಿಲ್ಲೆ.	ಪ.ಜಾ/ಎ.ಕೆ.	0.00	1.05	618750	618750
78	ಶ್ರೀಮತಿ.ಭಾಗ್ಯಮ್ಮ ಕೋಂ ರಾಜು, ಕೆ.ಬೆಳ್ತೂರು, ಸರಗೂರು ಹೋಬಳಿ, ಹೆಚ್.ಡಿ.ಕೋಟೆ ತಾ: ಮೈಸೂರು ಜಿಲ್ಲೆ.	ಪ.ಜಾ/ಎ.ಕೆ.	0.00	1.05	618750	618750
79	ಶ್ರೀಮತಿ.ರೇಣುಕ ಕೋಂ ಸ್ವಾಮಿ, ಹೊಸಹಳ್ಳಿ, ಕಸಬಾ ಹೋಬಳಿ, ಹೆಚ್.ಡಿ.ಕೋಟೆ ತಾ: ಮೈಸೂರು ಜಿಲ್ಲೆ.	ಪ.ಜಾ/ಎ.ಕೆ.	0.00	0.31	465000	465000
80	ಶ್ರೀಮತಿ.ಪೂರ್ಣಿಮ. ಎಸ್ ಗಂಡ, ಹೆಚ್. ಆರ್. ಹರ್ಷಕುಮಾರ, ಹೊಸಹಳ್ಳಿ, ಕಸಬಾ ಹೋಬಳಿ, ಹೆಚ್.ಡಿ.ಕೋಟೆ ತಾ: ಮೈಸೂರು ಜಿಲ್ಲೆ	ಪ.ಜಾ/ಎ.ಕೆ.	0.00	1.05	675000	675000
81	ಶ್ರೀಮತಿ.ದೇವಮ್ಮ ಕೋಂ ಬೆಟ್ಟಯ್ಯ, ಹೊಸಹಳ್ಳಿ, ಕಸಬಾ ಹೋಬಳಿ ಹೆಚ್.ಡಿ.ಕೋಟೆ ತಾ: ಮೈಸೂರು ಜಿಲ್ಲೆ.	ಪ.ಜಾ/ಎ.ಕೆ.	0.00	1.04	660000	660000
82	ಶ್ರೀಮತಿ.ತಾಯಮ್ಮ ಗಂಡ ಆಂಜನೇಯ, ಹೊಸಹಳ್ಳಿ, ಕಸಬಾ ಹೋಬಳಿ ಹೆಚ್.ಡಿ.ಕೋಟೆ ತಾ: ಮೈಸೂರು ಜಿಲ್ಲೆ.	ಪ.ಜಾ/ಎ.ಕೆ.	0.00	1.04	660000	660000
83	ಶ್ರೀಮತಿ.ರಾಜಮ್ಮ ಕೋಂ ನಿಂಗರಾಜು, ಭೈರಾಪುರ, ಟಿ.ನರಸೀಪುರ ಟೌನ್, ಮೈಸೂರು ಜಿಲ್ಲೆ	ಪ.ಜಾ/ಎ.ಕೆ.	0.00	1.03	671875	671875
84	ಶ್ರೀಮತಿ.ಲಕ್ಷ್ಮಿ ಕೋಂ ಚಲುವಯ್ಯ, ಹೊನ್ನೇನಹಳ್ಳಿ, ರಾವಂದೂರು ಹೋಬಳಿ, ಪಿರಿಯಪಟ್ಟಣ ತಾಲ್ಲೂಕು ಮೈಸೂರು ಜಿಲ್ಲೆ.	ಪ.ಜಾ/ಎ.ಕೆ.	1.24	0.00	640000	640000
85	ಶ್ರೀಮತಿ.ಜಯಲಕ್ಷ್ಮಿ ಕೋಂ ಚಲುವರಾಜ, ಹೊನ್ನೇನಹಳ್ಳಿ, ರಾವಂದೂರು ಹೋಬಳಿ, ಪಿರಿಯಪಟ್ಟಣ ತಾಲ್ಲೂಕು ಮೈಸೂರು ಜಿಲ್ಲೆ.	ಪ.ಜಾ/ಎ.ಕೆ.	0.00	1.35	750000	750000
86	ಶ್ರೀಮತಿ.ಲಕ್ಷ್ಮಿ ಕೋಂ ಮಂಜು, ಹೊನ್ನೇನಹಳ್ಳಿ, ರಾವಂದೂರು ಹೋಬಳಿ, ಪಿರಿಯಪಟ್ಟಣ ತಾಲ್ಲೂಕು ಮೈಸೂರು ಜಿಲ್ಲೆ.	ಪ.ಜಾ/ಎ.ಕೆ.	0.00	1.26	660000	660000
87	ಶ್ರೀಮತಿ.ಮರಮ್ಮ ಕೋಂ ಸಿದ್ದಯ್ಯ, ನಿಲಸೋಗೆ ಗ್ರಾಮ, ಮೂಗೂರು ಹೋಬಳಿ, ಟಿ.ನರಸೀಪುರ ತಾಲ್ಲೂಕು ಮೈಸೂರು ಜಿಲ್ಲೆ.	ಪ.ಜಾ/ಎ.ಕೆ.	0.00	1.00	375000	375000
88	ಶ್ರೀಮತಿ.ಗೌರಮ್ಮ ಕೋಂ ಮಹೇಶ, ಹೊಸಹಳ್ಳಿ, ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ	ಪ.ಜಾ/ಎ.ಕೆ.	0.00	1.00	600000	600000
89	ಶ್ರೀಮತಿ.ಶಾಂತಮ್ಮ ಕೋಂ ಚಂದ್ರ, ಹೊಸಹಳ್ಳಿ, ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ	ಪ.ಜಾ/ಎ.ಕೆ.	0.00	1.00	600000	600000

90	ಶ್ರೀಮತಿ.ದೇವಿರಮ್ಮ ಕೋಂ ಸೋಮಶೇಖರ, ಹೊಸಹಳ್ಳಿ, ಹೆಚ್.ಡಿ.ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ	ಪ.ಜಾ/ಎ.ಕೆ.	0.00	1.00	600000	600000
91	ಶ್ರೀಮತಿ.ಸುರಭಿ ಕೋಂ ಉಮೇಶ ಕನ್ನಹಳ್ಳಿ, ಮೂಗೂರು ಹೋಬಳಿ, ಟಿ.ನರಸೀಪುರ ತಾ: ಮೈಸೂರು ಜಿಲ್ಲೆ	ಪ.ಜಾ/ಎ.ಕೆ	0.00	1.33 1/2	643125	643125
ತುಮಕೂರು ಜಿಲ್ಲೆ						
92	ಶ್ರೀಮತಿ.ಅನಸೂಯಮ್ಮ ಕೋಂ ಶಿವಣ್ಣ, ಕಡೇಹಳ್ಳಿ ಕಾವಲ್, ದಬ್ಬೆಘಟ್ಟ ಹೋಬಳಿ, ತುರುವೇಕೆರೆ ತಾ: ತುಮಕೂರು ಜಿಲ್ಲೆ.	ಎಸ್.ಸಿ.ಎಕೆ	2.05	0.00	743750	743750
93	ಶ್ರೀಮತಿ.ಜಯಮ್ಮ ಕೋಂ ದೈವಾಧೀನಂ, ಕೃಷ್ಣಪುರ, ಪಾವಗಡ ತಾ: ತುಮಕೂರು ಜಿಲ್ಲೆ.	ಪ.ಜಾ/ ಎ.ಕೆ.	2.00	0.00	400000	400000
94	ಶ್ರೀಮತಿ.ಗಂಗಮ್ಮ ಕೋಂ ವಲಸಪ್ಪ, ಕೃಷ್ಣಪುರ, ಪಾವಗಡ ತಾ: ತುಮಕೂರು ಜಿಲ್ಲೆ.	ಪ.ಜಾ/ ಎ.ಕೆ.	2.00	0.00	400000	400000

ವ್ಯವಸ್ಥಾಪಕ ನಿರ್ದೇಶಕರು

ಅನುಬಂಧ-4

1) ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ

ಮೈಸೂರು ಜಿಲ್ಲೆಯ ಮಾಹಿತಿಯಂತೆ 2019-20ನೇ ಸಾಲಿನಲ್ಲಿ ಭೂ ಒಡೆತನ ಯೋಜನೆಯಡಿ ರೂ: 17,67,000/- ಗಳನ್ನು ಬಿಡುಗಡೆ ಮಾಡಿ

ಶ್ರೀಮತಿ ನಾಗಮ್ಮ ಕೋಂ ಜೋಗೇಶ. ವಡ್ಡರಗುಡಿ ಗ್ರಾಮ. ಹಂಪಾಪುರ ಹೋಬಳಿ. ಹೆಚ್.ಡಿ.ಕೋಟೆ ತಾಲ್ಲೂಕು. ಮೈಸೂರು ಜಿಲ್ಲೆ. 2) ಶ್ರೀಮತಿ ಭಾಗ್ಯ ಕೋಂ ಆರ್.ರಘು. ವಡ್ಡರಗುಡಿ ಗ್ರಾಮ. ಹಂಪಾಪುರ ಹೋಬಳಿ. ಹೆಚ್.ಡಿ.ಕೋಟೆ ತಾಲ್ಲೂಕು. ಮೈಸೂರು ಜಿಲ್ಲೆಯ ಫಲಾನುಭವಿಗೆ ಭೂಮಿ ನೋಂದಣಿ ಮಾಡಿಕೊಡಲಾಗಿದೆ.

ಮಂಡ್ಯ ಮತ್ತು ತುಮಕೂರು ಜಿಲ್ಲಾ ಕಚೇರಿಗಳಿಂದ ಯಾವುದೇ ಪ್ರಸ್ತಾವನೆಯು ಸ್ವೀಕೃತವಾಗದೇ ಇರುವುದರಿಂದ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಿರುವುದಿಲ್ಲ.

2) ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ

ಈ ನಿಗಮದ ವತಿಯಿಂದ ಮೈಸೂರು ಮತ್ತು ತುಮಕೂರು ಜಿಲ್ಲೆಗಳಿಂದ ಮಂಜೂರಾತಿ ಕೋರಿ ಯಾವುದೇ ಪ್ರಸ್ತಾವನೆಗಳು ಬಂದಿಲ್ಲದ ಪ್ರಯುಕ್ತಸದರಿ ಜಿಲ್ಲೆಗಳ ಭೂ ರಹಿತ ರೈತರಿಗೆ ಸೌಲಭ್ಯ ಒದಗಿಸಿರುವುದಿಲ್ಲ. ಮಂಡ್ಯ ಜಿಲ್ಲೆಯ ಈ ಕೆಳಕಂಡ ಫಲಾಪೇಕ್ಷಿಗಳಿಗೆ ಸೌಲಭ್ಯವನ್ನು ಒದಗಿಸಲಾಗಿರುತ್ತದೆ.

(ರೂ. ಲಕ್ಷಗಳಲ್ಲಿ)

ಕ್ರ. ಸಂ	ಫಲಾನುಭವಿ ಹೆಸರು ಮತ್ತು ವಿಳಾಸ	ಜಮೀನಿನ ವಿಸ್ತೀರ್ಣ	ಒದಗಿಸಿರುವ ಅನುದಾನ
1	ಶ್ರೀಮತಿ ಸಣ್ಣಮ್ಮ ಕೋಂ ಮಲ್ಲೇಶ, ಅರಕೆರೆ ಗ್ರಾಮ, ಶ್ರೀರಂಗಪಟ್ಟಣ ತಾಲ್ಲೂಕು ಮಂಡ್ಯ ಜಿಲ್ಲೆ.	20 ಗುಂಟೆ (ತರಿ)	ರೂ. 7.50

3) ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮದಿಂದ ಈ ಯೋಜನೆಯಡಿ ಯಾವುದೇ ಭೂಮಿ ಹಂಚಿಕೆ ಮಾಡಿರುವುದಿಲ್ಲ. ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮ ಮತ್ತು ಡಾ ಬಾಬು ಜಗಜೀವನರಾಂ ಚರ್ಮ ಕೈಗಾರಿಕೆಗಳ ಅಭಿವೃದ್ಧಿ ನಿಗಮಗಳಿಗೆ ಈ ಯೋಜನೆ ಅನ್ವಯಿಸುವುದಿಲ್ಲ.

*****

ಅನುಬಂಧ-2

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-431ಕ್ಕೆ ಉತ್ತರ.

ಕ್ರ. ಸಂ	ನಿಗಮಗಳ ಹೆಸರು	ಸ್ಥಾಪನೆಯಾದ ವರ್ಷ	ಉದ್ದೇಶ	ಜಾರಿಯಲ್ಲಿರುವ ಯೋಜನೆಗಳು
1	2	3	4	5
1	ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ	1977-78	ಹಿಂದುಳಿದ ವರ್ಗಗಳ ಜನರು ಆರ್ಥಿಕ ಮತ್ತು ಅಭಿವೃದ್ಧಿ ಚಟುವಟಿಕೆ ಕೈಗೊಳ್ಳಲು ಸಾಲ ಸೌಲಭ್ಯ ಒದಗಿಸುವುದು ಹಾಗೂ ಸ್ವಯಂ ಉದ್ಯೋಗಕ್ಕೆ ವೃತ್ತಿ ಕುಶಲತೆ ಅಭಿವೃದ್ಧಿಗಾಗಿ ಕೌಶಲ್ಯತೆ ಹೆಚ್ಚಿಸುವ ತರಬೇತಿ ನೀಡುವುದು ಈ ನಿಗಮದ ಉದ್ದೇಶವಾಗಿರುತ್ತದೆ.	➢ ಡಿ.ದೇವರಾಜ ಅರಸು ಸ್ವಯಂ ಉದ್ಯೋಗ ಸಾಲ ಯೋಜನೆ. ➢ ಅರಿವು ಶೈಕ್ಷಣಿಕ ಸಾಲ ಯೋಜನೆ. ➢ ಗಂಗಾ ಕಲ್ಯಾಣ ನೀರಾವರಿ ಯೋಜನೆ.
2	ಕರ್ನಾಟಕ ಅಲೆಮಾರಿ /ಅರೆ ಅಲೆಮಾರಿ ಅಭಿವೃದ್ಧಿ ನಿಗಮ	2019-20	ಅಲೆಮಾರಿ/ಅರೆ ಅಲೆಮಾರಿ ಜನರು ಆರ್ಥಿಕ ಮತ್ತು ಅಭಿವೃದ್ಧಿ ಚಟುವಟಿಕೆ ಕೈಗೊಳ್ಳಲು ಸಾಲ ಸೌಲಭ್ಯ ಒದಗಿಸುವುದು ಹಾಗೂ ಸ್ವಯಂ ಉದ್ಯೋಗಕ್ಕೆ ವೃತ್ತಿ ಕುಶಲತೆ ಅಭಿವೃದ್ಧಿಗಾಗಿ ಕೌಶಲ್ಯತೆ ಹೆಚ್ಚಿಸುವ ತರಬೇತಿ ನೀಡುವುದು ಈ ನಿಗಮದ ಉದ್ದೇಶವಾಗಿರುತ್ತದೆ.	➢ ಸ್ವಯಂ ಉದ್ಯೋಗ ಸಾಲ ಯೋಜನೆ. ➢ ಸ್ವ-ಸಹಾಯ ಗುಂಪುಗಳ ಸಾಲ ಮತ್ತು ಉದ್ಯೋಗ ಸಾಲ ಯೋಜನೆ. ➢ ಬ್ಯಾಂಕ್ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಸಾಲ ಯೋಜನೆ. ➢ ಅರಿವು ಶೈಕ್ಷಣಿಕ ಸಾಲ ಯೋಜನೆ. ➢ ಗಂಗಾ ಕಲ್ಯಾಣ ನೀರಾವರಿ ಯೋಜನೆ.
3	ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ	2019-20	ಸವಿತಾ ಸಮಾಜದ ಜನರು ಆರ್ಥಿಕ ಮತ್ತು ಅಭಿವೃದ್ಧಿ ಚಟುವಟಿಕೆ ಕೈಗೊಳ್ಳಲು ಸಾಲ ಸೌಲಭ್ಯ ಒದಗಿಸುವುದು ಹಾಗೂ ಸ್ವಯಂ ಉದ್ಯೋಗಕ್ಕೆ ವೃತ್ತಿ ಕುಶಲತೆ ಅಭಿವೃದ್ಧಿಗಾಗಿ ಕೌಶಲ್ಯತೆ ಹೆಚ್ಚಿಸುವ ತರಬೇತಿ ನೀಡುವುದು ಈ ನಿಗಮದ ಉದ್ದೇಶವಾಗಿರುತ್ತದೆ.	➢ ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆ. ➢ ಸ್ವಯಂ ಉದ್ಯೋಗ ಸಾಲ ಯೋಜನೆ.
4	ಕರ್ನಾಟಕ ಮಡಿವಾಳ	2019-20	ಮಡಿವಾಳ ಮಾಚಿದೇವ ಜನರು ಆರ್ಥಿಕ ಮತ್ತು ಅಭಿವೃದ್ಧಿ ಚಟುವಟಿಕೆ ಕೈಗೊಳ್ಳಲು ಸಾಲ	➢ ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆ.

	ಮಾಚಿದೇವ ಅಭಿವೃದ್ಧಿ ನಿಗಮ		ಸೌಲಭ್ಯ ಒದಗಿಸುವುದು ಹಾಗೂ ಸ್ವಯಂ ಉದ್ಯೋಗಕ್ಕೆ ವೃತ್ತಿ ಕುಶಲತೆ ಅಭಿವೃದ್ಧಿಗಾಗಿ ಕೌಶಲ್ಯತೆ ಹೆಚ್ಚಿಸುವ ತರಬೇತಿ ನೀಡುವುದು ಈ ನಿಗಮದ ಉದ್ದೇಶವಾಗಿರುತ್ತದೆ.	➢ ಸ್ವಯಂ ಉದ್ಯೋಗ ಸಾಲ ಯೋಜನೆ ➢ ಸ್ವ ಸಹಾಯ ಗುಂಪುಗಳ ಮೂಲಕ ಸಾಲ ಮತ್ತು ಸಹಾಯಧನ ಯೋಜನೆ. ➢ ಅರಿವು ಶೈಕ್ಷಣಿಕ ನವೀಕರಣ ಸಾಲ ಯೋಜನೆ .
5	ಕರ್ನಾಟಕ ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮ	2021-22	ನಿಗಮ ಸ್ಥಾಪಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ	ಯೋಜನೆಗಳನ್ನು ರೂಪಿಸುವ ಪ್ರಕ್ರಿಯೆಯು ಚಾಲ್ತಿಯಲ್ಲಿದೆ.
6	ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ	2017-18	ಹಿಂದುಳಿದ ಪ್ರವರ್ಗ-1ರಲ್ಲಿ ಬರುವ ಬೆಸ್ತ, ಕಬ್ಬಲಿಗ , ಕೋಲಿ , ಗಂಗಾಮಾ, ಮಗವೀರ ಮತ್ತು ಇವುಗಳ ಉಪ ಜಾತಿಗಳಿಗೆ ಸಮಗ್ರ ಅಭಿವೃದ್ಧಿಗಾಗಿ ಸಾಲ ಸೌಲಭ್ಯ ಒದಗಿಸುವುದು ಈ ನಿಗಮದ ಉದ್ದೇಶವಾಗಿದೆ.	➢ ಸ್ವಯಂ ಉದ್ಯೋಗ ಸಾಲ ಯೋಜನೆ. ➢ ಸ್ವ-ಸಹಾಯ ಗುಂಪುಗಳ ಸಾಲ ಮತ್ತು ಉದ್ಯೋಗ ಸಾಲ ಯೋಜನೆ. ➢ ಬ್ಯಾಂಕ್ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಸಾಲ ಯೋಜನೆ. ➢ ಅರಿವು ಶೈಕ್ಷಣಿಕ ಸಾಲ ಯೋಜನೆ. ➢ ಗಂಗಾ ಕಲ್ಯಾಣ ನೀರಾವರಿ ಯೋಜನೆ.
7	ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ	2013-14	ಕರ್ನಾಟಕ ವಿಶ್ವಕರ್ಮ ಮತ್ತು ಅದರ ಉಪ ಜಾತಿಗಳಿಗೆ ಸೇರಿದ ಜನರನ್ನು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಅಭಿವೃದ್ಧಿಗೊಳಿಸುವುದಾಗಿದೆ.	
8	ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮ	2019-20	ಆರ್ಯ ವೈಶ್ಯ ಸಮುದಾಯದವರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿಸುವುದು ಹಾಗೂ ಈ ಸಮುದಾಯದ ವಿದ್ಯಾರ್ಥಿಗಳ ಉನ್ನತ ವ್ಯಾಸಂಗಕ್ಕೆ ನೆರವಾಗುವ ನಿಟ್ಟಿನಲ್ಲಿ ಸಾಲ ಸೌಲಭ್ಯವನ್ನು ನೀಡುವುದು ನಿಗಮದ ಉದ್ದೇಶವಾಗಿದೆ.	➢ ಸ್ವಯಂ ಉದ್ಯೋಗ ನೇರ ಸಾಲ ಯೋಜನೆ ➢ ಅರಿವು ಶೈಕ್ಷಣಿಕ ಸಾಲ ಯೋಜನೆ

9	ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ	2017-18	ಪ್ರವರ್ಗ-1ರಡಿಯಲ್ಲಿ ಬರುವ ಉಪ್ಪಾರ ಮತ್ತು ಉಪ ಜಾತಿಗಳ ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಅಭಿವೃದ್ಧಿ ದೃಷ್ಟಿಯಿಂದ ಈ ನಿಗಮ ಸ್ಥಾಪಿಸಲಾಗಿದೆ.	➢ ಸ್ವಯಂ ಉದ್ಯೋಗ ನೇರ ಸಾಲ ಯೋಜನೆ ➢ ಅರಿವು ಶೈಕ್ಷಣಿಕ ಸಾಲ ಯೋಜನೆ ➢ ಗಂಗಾ ಕಲ್ಯಾಣ ನೀರಾವರಿ ಯೋಜನೆ
10	ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿ ನಿಗಮ	2021-22	ಕರ್ನಾಟಕ ಮರಾಠ ಸಮುದಾಯಗಳ ಅಭಿವೃದ್ಧಿಗಾಗಿ ಈ ನಿಗಮ ಸ್ಥಾಪಿಸಲಾಗಿದೆ.	ಯಾವುದೇ ಯೋಜನೆ ರೂಪಿಸಿಲ್ಲ.

****

ಅನುಬಂಧ-4

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ , ಬೆಂಗಳೂರು-52

ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಟಿ.ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ-431ಕ್ಕೆ ನಿಗಮದ ಉತ್ತರ.

2019–20ರ ಸಾಲಿನಲ್ಲಿ ಭೂ ಖರೀದಿ ಯೋಜನೆಯ ಜಿಲ್ಲಾವಾರು ಫಲಾನುಭವಿಗಳ ಪಟ್ಟಿ

ಕ್ರ. ಸಂ	ಫಲಾನುಭವಿಗಳ ಹೆಸರು ಮತ್ತು ವಿಳಾಸ	ಜಾತಿ	ಜಮೀನಿನ ವಿಸ್ತೀರ್ಣ ಮತ್ತು ವಿಳಾಸ	ಸಹಾಯ ಧನ	ಸಾಲ	ಒಟ್ಟು	ಭೂ ಮಾಲೀಕರ ಹೆಸರು
			ತುಮಕೂರು ಜಿಲ್ಲೆ 2019–20				
1	ಶ್ರೀಮತಿ ಆಶಾ ಕೋಂ ಮಂಜುನಾಥ್, ಅಕ್ಕಳಸಂದ್ರ, ಗೊಲ್ಲರಹಟ್ಟಿ, ದೊಂಬರನಹಳ್ಳಿ ಅಂಚೆ, ದಂಡಿನಶಿವರ ಹೋ., ತುರುವೇಕೆರೆ ತಾ॥	ಗೊಲ್ಲ	(2.00 ಎಕರೆ ಖುಷ್ಕಿ) ಅಕ್ಕಳಸಂದ್ರ ಗ್ರಾಮದ ಸ.ನಂ: 35/2	6,50,000	6,50,000	13,00,000	ಶ್ರೀಮತಿ ಶೈಲಾ ಕೋಂ ತ್ಯಾಗರಾಜು, ಅಕ್ಕಳಸಂದ್ರ, ದಂಡಿನಶಿವರ ಹೋ., ತುರುವೇಕೆರೆ ತಾ॥ ತುಮಕೂರು ಜಿಲ್ಲೆ॥
			ಮೈಸೂರು ಜಿಲ್ಲೆ 2019–20				
2	ಶ್ರೀಮತಿ ಗೌರಮ್ಮ ಕೋಂ ಶಿವಮಲ್ಲು ಬಸವನಪುರ, ಇಲವಾಲ ಹೋ., ಮೈಸೂರು ತಾ॥ ಮೈಸೂರು ಜಿಲ್ಲೆ.	ಹೆಳವ	(2.00 ಎಕರೆ ಖುಷ್ಕಿ) ಸಂ.ನಂ. 51/1ರ 2 ಎಕರೆ 25 ಗುಂಟೆ ಪೈಕಿ (2 ಎಕರೆ ಮಾತ್ರ)	3,00,000	3,00,000	6,00,000	ಶ್ರೀ ಕೃಷ್ಣೇಗೌಡ ಬಿನ್ ಮೂಗೇಗೌಡ. ಮನೆ ನಂ:337/1317 3ನೇ ಕ್ರಾಸ್, ಕಾವೇರಿ ನಗರ, ಬನಶಂಕರಿ 2ನೇ ಹಂತ ಬೆಂಗಳೂರು.

ವ್ಯವಸ್ಥಾಪಕ ನಿರ್ದೇಶಕರು.

೬

ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಬೆಂಗಳೂರು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	431
ವಿಧಾನ ಪರಿಷತ್ತಿನ ಸದಸ್ಯರ ಹೆಸರು	:	ಶ್ರೀ.ಕೆ.ಟಿ.ಶ್ರೀಕಂಠೇಗೌಡ (ಪದವೀದರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	:	18.02.2022
ವಿಷಯ	:	S.C/O.B.C ನಿಗಮಗಳ ವ್ಯಾಪ್ತಿಯಲ್ಲಿ ಬರುವ ಯೋಜನೆಗಳ ಬಗ್ಗೆ.
ಉತ್ತರಿಸಬೇಕಾದವರು	:	ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರಗಳು
ಅ)	ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ನಿಗಮಗಳು/ಮಂಡಳಿ/ಆಕಾಡೆಮಿ/ ಸೊಸೈಟಿ ಇತರೆಗಳು ಯಾವುವು: ಇವುಗಳನ್ನು ಯಾವಾಗ ಸ್ಥಾಪನೆ ಮಾಡಲಾಯಿತು. ಇವುಗಳ ಉದ್ದೇಶಗಳೇನು; ಇವುಗಳಲ್ಲಿ ಜಾರಿಯಲ್ಲಿರುವ ಯೋಜನೆಗಳಾವುವು: (ನಿಗಮವಾರು ವಿವರವಾದ ಮಾಹಿತಿ ನೀಡುವುದು)	ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರನ್ನು ಬಡತನರೇಖೆಗಿಂತ ಮೇಲೆ ತರುವ ಉದ್ದೇಶದಿಂದ ಕರ್ನಾಟಕ ಸರಕಾರದಿಂದ 1975ರಲ್ಲಿ ಸ್ಥಾಪಿಸಲ್ಪಟ್ಟಿರುತ್ತದೆ. ದಿನಾಂಕ:16.08.2005ರಲ್ಲಿ **ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ** ಎಂದು ಪುನರ್‌ನಾಮಕರಣ ಮಾಡಲಾಯಿತು. ಪ್ರಸ್ತುತ ನಿಗಮವು ಪರಿಶಿಷ್ಟ ಜಾತಿಯವರ. ಆರ್ಥಿಕ ಅಭಿವೃದ್ಧಿಗಾಗಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಬಡತನದ ರೇಖೆಗಿಂತ ಕೆಳಗಿರುವ ಪರಿಶಿಷ್ಟ ಜಾತಿಯವರ

		ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳನ್ನು ಅಭಿವೃದ್ಧಿಪಡಿಸುವುದು. ಸಾಲಸೌಲಭ್ಯಗಳು ಮತ್ತು ಅನುದಾನಿತ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವಲ್ಲಿ ಶ್ರಮಿಸುವುದೇ ನಿಗಮದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ನಿಗಮದ ಕಾರ್ಯಕ್ರಮಗಳನ್ನು ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಕಾರ್ಯಕ್ರಮದ ಅನುಷ್ಠಾನದ ಜವಾಬ್ದಾರಿಯನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಕಛೇರಿಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿವೆ.
ಆ)	ಪ್ರಸಕ್ತ ವರ್ಷದಲ್ಲಿ ರಾಜ್ಯದ ಒಕ್ಕಲಿಗರನ್ನು ದೇವರಾಜು ಅರಸು ನಿಗಮದ ಯೋಜನೆಗಳಿಂದ ಕೈಬಿಡಲಾಗಿದೆಯೇ; ಒಕ್ಕಲಿಗರ ನಿಗಮದಿಂದ ಪ್ರಸಕ್ತ ವರ್ಷದಲ್ಲಿ ರಾಜ್ಯದಲ್ಲಿ ಯಾವುದೇ ಯೋಜನೆ ಕೈಗೊಂಡಿರುವುದಿಲ್ಲವಾದುದರಿಂದ ರಾಜ್ಯದ ಒಕ್ಕಲಿಗರಿಗೆ ಅನ್ಯಾಯವಾಗಿದ್ದು, ಈ ಅನ್ಯಾಯವನ್ನು ಸರ್ಕಾರವು ಯಾವ ರೀತಿ ಸರಿಪಡಿಸಲಾಗುವುದು; (ವಿವರವಾದ ಮಾಹಿತಿ ನೀಡುವುದು)	ಅನ್ವಯಿಸುವುದಿಲ್ಲ
ಇ)	ಸದರಿ ನಿಗಮಗಳಿಂದ ಭೂ-ರಹಿತ ರೈತರಿಗೆ ಭೂಮಿ ಹಂಚಿಕೆ ಮಾಡಲು ಕಳೆದ 03 ವರ್ಷಗಳಿಂದ ಎಷ್ಟು ಹಣವನ್ನು ನೀಡಲಾಗಿದೆ (ನಿಗಮವಾರು ವರ್ಷಾವಾರು ವಿವರವಾದ ಮಾಹಿತಿ ನೀಡುವುದು)	ಅನುಬಂಧ-1ರಲ್ಲಿ ಲಗತ್ತಿಸಿದೆ.
ಈ)	ಸದರಿ ನಿಗಮಗಳಿಂದ ಮೈಸೂರು, ಮಂಡ್ಯ ಮತ್ತು ತುಮಕೂರು ಜಿಲ್ಲೆಗಳಲ್ಲಿ ಕಳೆದ ೦೩ ವರ್ಷಗಳಿಂದ ಎಷ್ಟು ಭೂ ರಹಿತ ರೈತರಿಗೆ ಭೂಮಿ ನೀಡಲಾಗಿದೆ; ಈ ಸಂಬಂಧ ಎಷ್ಟು ಹಣ ಪಾವತಿ ಮಾಡಲಾಗಿದೆ? (ವರ್ಷವಾರು ರೈತರ ವಿಳಾಸವಾರು ವಿವರವಾದ ಮಾಹಿತಿ ನೀಡುವುದು)	ಅನುಬಂಧ-2ರಲ್ಲಿ ಲಗತ್ತಿಸಿದೆ.

ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ		349 (431)
ವಿಧಾನ ಪರಿಷತ್ತಿನ ಸದಸ್ಯರ ಹೆಸರು		ಶ್ರೀ/ಶ್ರೀಮತಿ ಕೆ.ಟಿ.ಶ್ರೀಕಂಠೇಗೌಡ
ಉತ್ತರಿಸಬೇಕಾದ ದಿನಾಂಕ		18.2.2022
ವಿಷಯ		ಮಂಡ್ಯ ಜಿಲ್ಲೆಯಲ್ಲಿರುವ ಹಿಂದುಳಿದ ವರ್ಗದವರ ಬಗ್ಗೆ

ಕ್ರ. ಸಂ	ಪ್ರಶ್ನೆ	ಉತ್ತರ
ಅ).	ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಬರುವ ನಿಗಮಗಳು/ಮಂಡಳಿ/ ಅಕಾಡೆಮಿ/ಸೊಸೈಟಿ ಇತರೆಗಳು ಯಾವುವು; ಇವುಗಳಲ್ಲಿ ಯಾವಾಗ ಸ್ಥಾಪನೆ ಮಾಡಲಾಯಿತು. ಇವುಗಳ ಉದ್ದೇಶಗಳೇನು; ಇವುಗಳಲ್ಲಿ ಜಾರಿಯಲ್ಲಿರುವ ಯೋಜನೆಗಳಾವುವು; (ನಿಗಮವಾರು ವಿವರವಾದ ಮಾಹಿತಿ ನೀಡುವುದು)	ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮವು ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿದೆ. ಕರ್ನಾಟಕ ಸರ್ಕಾರವು ಕಂಪನಿ ಕಾಯ್ದೆ1956ರ ಅಡಿಯಲ್ಲಿ, ದಿನಾಂಕ 23.2.2009 ರಂದು ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ ನಿಯಮಿತವನ್ನು ಸ್ಥಾಪಿಸಿರುತ್ತದೆ. **ಉದ್ದೇಶಗಳು:** ➢ ತಾಂಡಾಗಳ ಹಾಗೂ ತಾಂಡಾ ನಿವಾಸಿಗಳ ಸಮಗ್ರ ಅಭಿವೃದ್ಧಿಗಾಗಿ ಭೌತಿಕ, ಆರ್ಥಿಕ, ಶೈಕ್ಷಣಿಕ, ಆರೋಗ್ಯ, ನೈತಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮೂಲಭೂತ ಸೌಲಭ್ಯಗಳನ್ನು ತ್ವರಿತವಾಗಿ ಒದಗಿಸುವುದು. ➢ ತಾಂಡಾಗಳಿಗೆ ಸಂಪರ್ಕ ರಸ್ತೆ, ತಾಂಡಾಗಳಲ್ಲಿ ಸಿ.ಸಿ.ರಸ್ತೆ, ಒಳಚರಂಡಿ, ಸಮುದಾಯ ಭವನ, ಅಂಗನವಾಡಿ ಕಟ್ಟಡ, ತಾಂಡಾ ಬಡಾವಣೆ ಇತ್ಯಾದಿ ಮೂಲಭೂತ ಸೌಲಭ್ಯಯಗಳನ್ನು ಒದಗಿಸುವುದಾಗಿದೆ. ಜೊತೆಗೆ ಶುದ್ಧ ಮತ್ತು ಸುರಕ್ಷಿತ ಕುಡಿಯುವ ನೀರು, ವಿದ್ಯುಚ್ಛಕ್ತಿ, ವಸತಿ, ಸಾರಿಗೆ ಸಂಪರ್ಕ, ಸ್ವಚ್ಛತೆ ಮತ್ತು ನೈರ್ಮಲ್ಯ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಸಂಬಂಧಿಸಿದ ಇಲಾಖೆಗಳ ಸಹಯೋಗದಲ್ಲಿ ವ್ಯವಸ್ಥೆಗೊಳಿಸುವುದು. ➢ ಕೌಶಲ್ಯಾಭಿವೃದ್ಧಿ ತರಬೇತಿ ನೀಡುವುದರ ಮೂಲಕ ತಾಂಡಾ ನಿವಾಸಿಗಳಿಗೆ ಸ್ವಯಂ ಉದ್ಯೋಗ ಮತ್ತು ಆದಾಯ ಹೆಚ್ಚಿಸುವ ಚಟುವಟಿಕೆಗಳಲ್ಲಿ ತೊಡಗಿಸುವುದು. ವಿಶೇಷವಾಗಿ ಬಂಜಾರ ಉಡುಪು ತಯಾರಿಕ ಕೌಶಲ್ಯಕ್ಕೆ ಹೊಸ ತಂತ್ರ ಜ್ಞಾನ ಅಳವಡಿಸಿ ಉನ್ನತೀಕರಿಸುವುದರ ಮೂಲಕ ಯುವ ಬಂಜಾರ ಬಂಜಾರರನ್ನು ಸಾಂಪ್ರದಾಯಕ ಕಸೂತಿ ಕಲೆಯಲ್ಲಿ ತೊಡಗಿಸಿ ಫ್ಯಾಷನ್ ವಲಯವನ್ನು ಆಕರ್ಷಿಸುವಂತೆ ಮಾರುಕಟ್ಟೆ ಸ್ಥಾಪಿಸುವುದು. ➢ ತಾಂಡಾಗಳಿಗೆ ಕಾನೂನುಬದ್ಧ ಅಸ್ತಿತ್ವವನ್ನು ತಂದು ಕೊಡಲು ತಾಂಡಾ ನಿವಾಸಿಗಳು ತಲತಲಾಂತರದಿಂದ ವಾಸವಾಗಿರುವ ಸರ್ಕಾರಿ ಭೂಮಿ, ಗೋಮಾಳ, ಅರಣ್ಯ ಭೂಮಿ ಮತ್ತು ಖಾಸತಿ ಜಮೀನುಗಳಲ್ಲಿರುವ ನಿವೇಶನ/ಮನೆ ಮತ್ತು ಸಾಗುವಳಿ ಜಮೀನನ್ನು ಅವರ ಹೆಸರಿನಲ್ಲಿ ಸಕ್ರಮಗೊಳಿಸಿ ಹಕ್ಕುಪತ್ರ ಒದಗಿಸುವ ವ್ಯವಸ್ಥೆ ಮಾಡುವುದು.

<table>
<tr>
<td></td>
<td></td>
<td>➢ ಬಂಜಾರರ ಹಬ್ಬ ಹರಿದಿನ, ವೇಷಭೂಷಣ, ಸೇವಾಲಾಲ್ ಮಟ್, ಪದಕೋಶವನ್ನೊಳಗೊಂಡು ಬಂಜಾರ ಭಾಷೆಯ ಅಭಿವೃದ್ಧಿ, ಸಂಸ್ಕೃತಿ ಕಲೆ ಇತ್ಯಾದಿ ಕುಲಸಂಬಂಧಿ ವ್ಯವಸ್ಥೆಗಳನ್ನು ಉಳಿಸಿ-ಬೆಳೆಸಿ ಒಲಪಡಿಸುವುದು ಕುರಿತು ಸಂಶೋಧನೆ ನಡೆಸಿ ಪುನರುಜ್ಜೀವನಗೊಳಿಸಬೇಕಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದು.
ನಿಗಮದಲ್ಲಿ ಜಾರಿಯಲ್ಲಿರುವ ಯೋಜನೆಗಳು ವಿವರವನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.</td>
</tr>
<tr>
<td>ಇ)</td>
<td>ಸದರಿ ನಿಗಮಗಳಿಂದ ಭೂ-ರಹಿತ ರೈತರಿಗೆ ಭೂಮಿ ಹಂಚಿಕೆ ಮಾಡಲು ಕಳೆದ 3 ವರ್ಷಗಳಿಂದ ಎಷ್ಟು ಹಣವನ್ನು ನೀಡಲಾಗಿದೆ; (ನಿಗಮವಾರು, ವರ್ಷಾವಾರು ವಿವರವಾದ ಮಾಹಿತಿ ನೀಡುವುದು
)</td>
<td>
<table>
<tr><th>ಕ್ರ. ಸಂ</th><th>ವರ್ಷ</th><th>ಹಂಚಿಕೆ ಮಾಡಲಾದ ಅನುದಾನ ರೂ.ಲಕ್ಷಗಳಲ್ಲಿ</th></tr>
<tr><td>1</td><td>2018-19</td><td>ಡಾ|| ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸಲಾಗಿರುತ್ತದೆ</td></tr>
<tr><td>2</td><td>2019-20</td><td>3100.00</td></tr>
<tr><td>3</td><td>2020-21</td><td>ಅನುದಾನ ಬಿಡುಗಡೆಯಾಗಿರುವುದಿಲ್ಲ</td></tr>
</table>
</td>
</tr>
<tr>
<td>ಇ)</td>
<td>ಸದರಿ ನಿಗಮಗಳಿಂದ ಮೈಸೂರು ಮಂಡ್ಯ ಮತ್ತು ತುಮಕೂರು ಜಿಲ್ಲೆಗಳಲ್ಲಿ ಕಳೆದ 3 ವರ್ಷಗಳಿಂದ ಎಷ್ಟು ಭೂ ರಹಿತ ರೈತರಿಗೆ ಭೂಮಿ ನೀಡಲಾಗಿದೆ; ಈ ಸಂಬಂಧ ಎಷ್ಟು ಹಣ ಪಾವತಿ ಮಾಡಲಾಗಿದೆ? (ವರ್ಷಾವಾರು, ರೈತರ ವಿಳಾಸವಾರು ವಿವರವಾದ ಮಾಹಿತಿ ನೀಡುವುದು)</td>
<td>ಕಳೆದ 3 ವರ್ಷಗಳಲ್ಲಿ ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮಕ್ಕೆ ಮೈಸೂರು ಮಂಡ್ಯ ಮತ್ತು ತುಮಕೂರು ಜಿಲ್ಲೆಗಳಿಂದ ಪ್ರಸ್ತಾವನೆಗಳು ಸಲ್ಲಿಕೆಯಾಗಿರುವುದಿಲ್ಲ.</td>
</tr>
</table>

(ಯು.ಚಂದ್ರನಾಯ್ಕ)
ವ್ಯವಸ್ಥಾಪಕ ನಿರ್ದೇಶಕರು

ಅನುಬಂಧ-1

ವೈಯಕ್ತಿಕ ಫಲಾನುಭವಿ ಆಧಾರಿತ ಯೋಜನೆಗಳಿಗೆ ಅನುಸರಿಸುವ ಮಾನದಂಡಗಳ ವಿವರ

ನೇರಸಾಲ ಯೋಜನೆ

ನೇರಸಾಲ ಯೋಜನೆ :ಚಟುವಟಿಕೆಗಳು :- ಹಣ್ಣು ಹಂಪಲು, ಮೀನು ಮಾಂಸ, ಕುರಿ, ಹಂದಿ, ಮೊಲ, ಹಸು, ಸಾಕಾಣಿಕೆ, ಮಳಿಗೆ/ತಳ್ಳುಗಾಡಿ ದುಡಿಮೆ/ ಇತ್ಯಾದಿ ಕಿರು ಆರ್ಥಿಕ ಚಟುವಟಿಕೆಗಳಿಗೆ ಘಟಕ ವೆಚ್ಚ ರೂ. 50,000/-ಗಳ (ಗರಿಷ್ಟ ಸಹಾಯಧನ ರೂ.25,000/- ಸಾಲ ರೂ.25,000/-) ಸೌಲಭ್ಯವನ್ನು ನಿಗಮದಿಂದ ನೇರವಾಗಿ ಮಂಜೂರಾತಿ ಮಾಡಲಾಗುವುದು.

ಮಾನದಂಡಗಳು

1. ಫಲಾನುಭವಿಗಳು ಕಡ್ಡಾಯವಾಗಿ ಪರಿಶಿಷ್ಟ ಜಾತಿ ಲಂಬಾಣಿ ಜನಾಂಗದವರಾಗಿರತಕ್ಕದ್ದು.
2. ಲಂಬಾಣಿ/ಬಂಜಾರ ಜನಾಂಗದ 21 ವರ್ಷದಿಂದ 50 ವರ್ಷದವರೆಗಿನ ಅರ್ಜಿದಾರರ ಅಗತ್ಯ ದಾಖಲಾತಿಗಳಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಬಿ.ಪಿ.ಎಲ್ ಪಡಿತರ ಚೀಟಿ, ಭಾವಚಿತ್ರ ಹಾಗೂ ಅಗತ್ಯ ದಾಖಲೆಗಳನ್ನು ಪಡೆಯುವುದು.

ಮರುಪಾವತಿ ವಿವರ

ಸದರಿ ಯೋಜನೆಯಲ್ಲಿ ಪಡೆದ ಸಾಲವನ್ನು ಫಲಾನುಭವಿ ವಾರ್ಷಿಕ ಶೇ.4ರ ಬಡ್ಡಿ ದರದಲ್ಲಿ 18 ತಿಂಗಳುಗಳ ಒಳಗೆ ಮರುಪಾವತಿಸಬೇಕು. ಮಂಜೂರಾಗಿ 3 ತಿಂಗಳ ನಂತರ ಮರು ಪಾವತಿ ಪ್ರಾರಂಭಿಸತಕ್ಕದ್ದು.

ಉದ್ಯಮಶೀಲತಾ ಯೋಜನೆ

ಪರಿಶಿಷ್ಟ ಜಾತಿಯ ಲಂಬಾಣಿ/ಬಂಜಾರ/ಲಮಾಣಿ ಜನಾಂಗದ ಅರ್ಹ ನಿರುದ್ಯೋಗಿಗಳು ಸ್ವಯಂ ಉದ್ಯೋಗದಲ್ಲಿ ತೊಡಗಿಕೊಂಡು, ಆದಾಯ ಗಳಿಸಲು ಘಟಕ ವೆಚ್ಚಕ್ಕೆ ಬ್ಯಾಂಕಿನಿಂದ ಮಂಜೂರಾದ ಸಾಲದ ಶೇ. 70 ರಷ್ಟು ಅಥವಾ ಗರಿಷ್ಠ ರೂ. 2.00 ಲಕ್ಷದವರೆಗೆ ಸಹಾಯಧನವನ್ನು ನಿಗಮದಿಂದ ಮಂಜೂರು ಮಾಡಲಾಗುವುದು. ಹಾಗೂ ಸರಕು ವಾಹನಗಳಿಗೆ ಗರಿಷ್ಟ ರೂ.3.50 ಲಕ್ಷ ಸಹಾಯಧನ ನಿಗಮದಿಂದ ಮಂಜೂರು ಮಾಡಿ ಬ್ಯಾಂಕ್ ಸಹಯೋಗದೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

ಮಾನದಂಡಗಳು

1. ಫಲಾನುಭವಿಗಳು ಕಡ್ಡಾಯವಾಗಿ ಪರಿಶಿಷ್ಟ ಜಾತಿ ಲಂಬಾಣಿ ಜನಾಂಗದವರಾಗಿರತಕ್ಕದ್ದು.
2. ಲಂಬಾಣಿ/ಬಂಜಾರ ಜನಾಂಗದ 21 ವರ್ಷದಿಂದ 50 ವರ್ಷದವರೆಗಿನ ಅರ್ಜಿದಾರರ ಅಗತ್ಯ ದಾಖಲಾತಿಗಳಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಬಿ.ಪಿ.ಎಲ್ ಪಡಿತರ ಚೀಟಿ, ಭಾವಚಿತ್ರ ಹಾಗೂ ಅಗತ್ಯ ದಾಖಲೆಗಳನ್ನು ಪಡೆಯುವುದು.
3. ಮಂಜೂರಾತಿ ಮಾಡಿರುವ ಸಾಲವನ್ನು ಉದ್ದೇಶಿಸಿರುವ ಯೋಜನೆಗೆ ಮಾತ್ರ ಹಣ ಬಿಡುಗಡೆ ಮಾಡುವುದು.
4. ಬ್ಯಾಂಕ್ ಕ್ಲೇಮ್‌ನೊಂದಿಗೆ ಹಣ ಬಿಡುಗಡೆಗೆ ಸಲ್ಲಿಸುವುದು.

ಮರುಪಾವತಿ ವಿವರ

ಬ್ಯಾಂಕ್ ನಿಯಮದಂತೆ ಮರುಪಾವತಿ ಮಾಡುವುದು

ಮೈಕ್ರೋಕ್ರೆಡಿಟ್

ಮಹಿಳೆಯರಲ್ಲಿ ಗುಂಪು ಚಟುವಟಿಕೆಗಳಿಗೆ ಉತ್ತೇಜನ ನೀಡಲು ಮಹಿಳಾ ಗುಂಪುಗಳು ಸ್ವಯಂ ಉದ್ಯೋಗ ಕೈಗೊಂಡು ಆದಾಯ ಗಳಿಸಲು ಕನಿಷ್ಠ 10 ಸಂಖ್ಯೆ ಸದಸ್ಯರಿರುವ ನೋಂದಾಯಿತ ಮಹಿಳಾ ಸ್ವಸಹಾಯ ಸಂಘಗಳಿಗೆ ರೂ. 2.50 ಲಕ್ಷಗಳ (ಪ್ರತಿ ಸದಸ್ಯರಿಗೆ ರೂ.15,000/-ಗಳ ಸಹಾಯಧನ ಮತ್ತು ರೂ.10,000/-ಗಳ ಬೀಜಧನ) ಸೌಲಭ್ಯವನ್ನು ನಿಗಮದಿಂದ ಮಂಜೂರು ಮಾಡಲಾಗುವುದು.

ಮಾನದಂಡಗಳು

1. ಸಂಘದ ನೊಂದಣಿ, ನವೀಕರಣ ಪಡೆಯುವುದು.
2. ಲಂಬಾಣಿ/ಬಂಜಾರ ಜನಾಂಗದ 18 ವರ್ಷ ಮೇಲ್ಪಟ್ಟ ಮಹಿಳಾ ಅರ್ಜಿದಾರರ ಅಗತ್ಯ ದಾಖಲಾತಿಗಳಾದ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಬಿ.ಪಿ.ಎಲ್ ಪಡಿತರ ಚೀಟಿ, ಭಾವಚಿತ್ರ ಹಾಗೂ ಅಗತ್ಯ ದಾಖಲೆಗಳನ್ನು ಪಡೆಯುವುದು.
3. ಮಂಜೂರಾತಿ ಮಾಡಿರುವ ಸಾಲವನ್ನು ಉದ್ದೇಶಿಸಿರುವ ಯೋಜನೆಗೆ ಮಾತ್ರ ಹಣ ಬಿಡುಗಡೆ ಮಾಡುವುದು.
4. ಸಾಲ ಮಂಜೂರಾದ 30 ದಿನದೊಳಗಾಗಿ ಸಂಘಗಳಿಗೆ ಸಾಲ ಬಿಡುಗಡೆ ಮಾಡಿ ನಿಗದಿತ ನಮೂನೆಯಲ್ಲಿ ಹಣ ವಿನಿಯೋಗ ಪ್ರಮಾಣ ಪತ್ರವನ್ನು ಸಲ್ಲಿಸುವುದು.
5. ಸಾಲ ಮರುಪಾವತಿ ಜವಾಬ್ದಾರಿ ವಹಿಸಿಕೊಳ್ಳುವ ಬಗ್ಗೆ ಸ್ವ ಸಹಾಯ ಸಂಘಗಳ ಕಾರ್ಯದರ್ಶಿಗಳಿಗೆ ಜವಾಬ್ದಾರಿ ವಹಿಸಿ ಛಾಪಾ ಕಾಗದದಲ್ಲಿ ಒಪ್ಪಂದ ಕರಾರು ಮಾಡಿಕೊಳ್ಳತಕ್ಕದ್ದು, ಪ್ರಾಮಿಸರಿ ನೋಟ್, ಕನ್ಸಿಡರೇಷನ್ ರಸೀದಿ, ವಾರಸುದಾರರನ್ನು ನೇಮಕ ಮಾಡುವ ಪತ್ರ ಹಾಗೂ ಆರ್ಟಿಕಲ್ಸ್ ಆಫ್ ಅಗ್ರಿಮೆಂಟ್‌ನ್ನು ಸ್ವಸಹಾಯ ಸಂಘದ ಸದಸ್ಯರಿಂದ ಪಡೆಯುವುದು.
6. ಉಲ್ಲೇಖ(1)ರ ಸರ್ಕಾರ ಸುತ್ತೋಲೆಯಂತೆ ಕನಿಷ್ಠ 10 ಮಹಿಳೆಯರು ಸ್ವ ಸಹಾಯ ಗುಂಪಿಗೆ ಮಾತ್ರ ಹಣ ಬಿಡುಗಡೆ ಮಾಡತಕ್ಕದ್ದು, ಸದರಿ ಸ್ವಸಹಾಯ ಸಂಘವು ನೊಂದಣಿಯಾದ ಸಂಘ ಆಗಿರಬೇಕು.
7. ಸಂಘದ ಹೆಸರಿನಲ್ಲಿ ಬ್ಯಾಂಕ್ ಖಾತೆ ಹೊಂದಿರಬೇಕು.
8. ಒಬ್ಬ ಸದಸ್ಯರಿಗೆ ಒಟ್ಟು ರೂ. 25,000/- ರಂತೆ (ರೂ.15,000/- ಸಹಾಯಧನ ಮತ್ತು ರೂ. 10,000/- ಸಾಲ) ಒಟ್ಟು 10 ಸದಸ್ಯರಿಗೆ ಒಟ್ಟು ರೂ. 2.50 ಲಕ್ಷ ನೀಡುವುದು. ಒಂದು ವೇಳೆ
9. ಸಂಘದಲ್ಲಿ 10 ಕ್ಕಿಂತ ಹೆಚ್ಚಿನ ಸದಸ್ಯರಿದ್ದಲ್ಲಿ ಸದರಿ ಸಂಖ್ಯೆಗನುಗುಣವಾಗಿ ಸಾಲ ಸಹಾಯಧನ ನೀಡುವುದು.
10. ಸದರಿ ಸ್ವ ಸಹಾಯ ಸಂಘ ಆದಾಯ ಬರುವ ಆರ್ಥಿಕ ಚಟುವಟಿಕೆಗಳಾದ ಉತ್ಪಾದನಾ/ಸೇವಾ ಘಟಕಗಳನ್ನು ಕೈಗೊಳ್ಳತಕ್ಕದ್ದು.

ಮರುಪಾವತಿ

ಸದರಿ ಯೋಜನೆಯಡಿ ಪಡೆದ ಸಾಲವನ್ನು ಫಲಾನುಭವಿ ವಾರ್ಷಿಕ 4ರ ಬಡ್ಡಿ ದರದಲ್ಲಿ 3 ವರ್ಷಗಳಲ್ಲಿ ತ್ರೈಮಾಸಿಕ ಕಂತುಗಳಲ್ಲಿ ಮರು ಪಾವತಿಸಬೇಕು

ಗಂಗಾ ಕಲ್ಯಾಣ ಯೋಜನೆ

ಸಣ್ಣ ಮತ್ತು ಅತಿಸಣ್ಣ ರೈತರು ಹೊಂದಿರುವ ಖುಷ್ಕಿ ಜಮೀನಿಗೆ ರೂ. 3.50/4.50 ಲಕ್ಷಗಳ ಘಟಕ ವೆಚ್ಚದಲ್ಲಿ ಕೊಳವೆಬಾವಿ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು

ಮಾನದಂಡಗಳು

1. ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.

2. ಅರ್ಜಿದಾರರು ಪರಿಶಿಷ್ಟ ಲಂಬಾಣಿ ಜಾತಿಗೆ ಸೇರಿದವರಾಗಿರಬೇಕು.
3. ಸಣ್ಣ ಮತ್ತು ಅತೀ ಸಣ್ಣ ರೈತರ ಪ್ರಮಾಣ ಪತ್ರ ಇರಬೇಕು.
4. ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಾದ ಉಡುಪಿ, ದಕ್ಷಿಣ ಕನ್ನಡ, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಹಾಗೂ ಉತ್ತರ ಕನ್ನಡ ಕನಿಷ್ಠ 1 ಎಕರೆ ಹೊಂದಿರಬೇಕು. ಹಾಗೂ ಇತರೆ ಜಿಲ್ಲೆಗಳಲ್ಲಿ 1.50 ಎಕರೆಯಿಂದ 5.00 ಎಕರೆ ವರೆಗೆ ಖುಷ್ಕಿ ಜಮೀನು ಹೊಂದಿರಬೇಕು.
5. ಅರ್ಜಿದಾರರು/ಕುಟುಂಬದ ಅವಲಂಬಿತ ಯಾವುದೇ ಸದಸ್ಯರು ಈ ಹಿಂದೆ ನಿಗಮ/ಸರ್ಕಾರದಿಂದ ರೂ.1,00,000/ ಮೇಲ್ಪಟ್ಟು ಸೌಲಭ್ಯ ಪಡೆದಿದ್ದಲ್ಲಿ ಅಂತಹ ಫಲಾನುಭವಿಗಳು ಈ ಸೌಲಭ್ಯ ಪಡೆಯಲು ಅರ್ಹರಿರುವುದಿಲ್ಲ.

ಮರು ಪಾವತಿ

ರೂ.50,000/- ಗಳ ಸಾಲದ ಮೊತ್ತವನ್ನು ಶೇ.6 ರ ಬಡ್ಡಿ ದರದಲ್ಲಿ 10 ಅರ್ಧವಾರ್ಷಿಕ ಕಂತುಗಳಲ್ಲಿ ಸಾಲ ಮರುಪಾವತಿಸಬೇಕು.

ಭೂ – ಒಡೆತನ ಯೋಜನೆ:

ಭೂ ರಹಿತ ಮಹಿಳಾ ಕೃಷಿ ಕಾರ್ಮಿಕರಿಗೆ ರೂ. 15.00/20.00 ಲಕ್ಷಗಳ ಘಟಕ ವೆಚ್ಚದಲ್ಲಿ, ಕೃಷಿಗೆ ಯೋಗ್ಯವಾದ ಜಮೀನನ್ನು ಪ್ರತಿ ಘಟಕದಲ್ಲಿ 2 ಎಕರೆ ಖುಷ್ಕಿ ಅಥವಾ 1 ಎಕರೆ ತರಿ ಅಥವಾ ಕನಿಷ್ಠ 0.5 ಎಕರೆ (20 ಗುಂಟೆ) ಭಾಗಾಯ್ತು ಅಥವಾ ಘಟಕ ವೆಚ್ಚಕ್ಕೆ ಲಭ್ಯವಾಗುವಷ್ಟು ಜಮೀನನ್ನು ನಿಗಮದಿಂದ ಖರೀದಿಸಿ ನೊಂದಣಿ ಮಾಡಿಸಿಕೊಡಲಾಗುವುದು.

ಮರು ಪಾವತಿ

ಶೇ.50 ರಷ್ಟು ಸಹಾಯ ಧನ ಹಾಗೂ ಅವಧಿ ಸಾಲವಾಗಿರುತ್ತದೆ. ಅವಧಿ ಸಾಲವನ್ನು ವಾರ್ಷಿಕ 6ರ ಬಡ್ಡಿ ದರದಲ್ಲಿ 20 ಅರ್ಧ ವಾರ್ಷಿಕ ಕಂತುಗಳಲ್ಲಿ ಮರುಪಾವತಿಸಬೇಕಾಗಿರುತ್ತದೆ.

ತಾಂಡಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ಯೋಜನೆಗಳು:-

- ತಾಂಡಗಳಲ್ಲಿ ಸರ್ವಋತು ಸಿಸಿ ರಸ್ತೆಗಳು ಮತ್ತು ಒಳ ಚರಂಡಿಗಳು
- ಮುಖ್ಯ ರಸ್ತೆಯಿಂದ ತಾಂಡಾಗಳಿಗೆ ಸಂಪರ್ಕ ರಸ್ತೆ
- ಶುದ್ಧ ಕುಡಿಯುವ ನೀರು
- ಬೀದಿ ದೀಪಗಳು ಮತ್ತು ವಿದ್ಯುತ್ ಸಂಪರ್ಕ

ತಾಂಡಗಳಿಗೆ ಸಂಪರ್ಕ ರಸ್ತೆ, ಸಿಸಿ ರಸ್ತೆ ಬಾಕ್ಸ್ ಚರಂಡಿ ಇತ್ಯಾದಿ ಮೂಲಭೂತ ಸೌಕರ್ಯಗಳ ಮಂಜೂರಾತಿ ನೀಡುವ ಪೂರ್ವದಲ್ಲಿ ಅವುಗಳ ಅಗತ್ಯತೆ ಕುರಿತು ಪರಿಶೀಲಿಸಲಾಗುತ್ತದೆ. ತಾಂಡಗಳಿಗೆ ಅಗತ್ಯ ಮೂಲಸೌಕರ್ಯಗಳ ಮಂಜೂರಾತಿಗಾಗಿ ಪೂರಕ ಮಾಹಿತಿಗಳನ್ನು ತಾಂಡದ ಜನರು ಒದಗಿಸಬೇಕು. ಸಿಸಿ ರಸ್ತೆ, ಸಂಪರ್ಕ ರಸ್ತೆ ಬಾಕ್ಸ್ ಚರಂಡಿಗಳ ನಿರ್ಮಾಣ ಸಂಬಂಧ ತಾಂಡದ ಬೀದಿ ರಸ್ತೆ/ಸಂಪರ್ಕ ರಸ್ತೆ/ಬಾಕ್ಸ್ ಚರಂಡಿಗಳ ಛಾಯಚಿತ್ರ ಉದ್ದಗಲ ಬೀದಿಯ ಎರಡು ಕೊನೆಗಳಲ್ಲಿರುವ ಮನೆಗಳ ಕುಟುಂಬದ ಹೆಸರು ಇತ್ಯಾದಿ ವಿವರ ಹಾಗೂ ಛಾಯಚಿತ್ರಗಳನ್ನು ಅಗತ್ಯವಾಗಿ ಒದಗಿಸಬೇಕು.

2. ಸಮುದಾಯ ಭವನಗಳ ನಿರ್ಮಾಣ ಯೋಜನೆ:-

- ಸಾಂಸ್ಕೃತಿಕ ಕೇಂದ್ರ ನಿರ್ಮಾಣ
- ತಾಂಡಾ ಮಟ್ಟದಲ್ಲಿ ಸೇವಾಲಾಲ್ ಸಮುದಾಯ ಭವನ.
- ಹೋಬಳಿ ಮಟ್ಟದ ಸೇವಾಲಾಲ್ ಸಮುದಾಯ ಭವನ
- ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಬಂಜಾರ ಭವನ.
- ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಬಂಜಾರ ಭವನ

ತಾಂಡಾಗಳಿಗೆ ಸೇವಾಲಾಲ್ ಸಮುದಾಯ ಭವನ, ಅಂಗನವಾಡಿ ಕಟ್ಟಡ, ಜಿಲ್ಲೆ ಮತ್ತು ತಾಲ್ಲೂಕು ವ್ಯಾಪ್ತಿಯಲ್ಲಿ ಬಂಜಾರ ಜನರು ವಾಸವಾಗಿರುವುದನ್ನು ಆಧರಿಸಿ ತಾಲ್ಲೂಕು ಕೇಂದ್ರ ಸ್ಥಳಗಳಲ್ಲಿ ತಾಲ್ಲೂಕು ಬಂಜಾರ ಭವನ ಜಿಲ್ಲಾ ಕೇಂದ್ರ ಸ್ಥಳದಲ್ಲಿ ಜಿಲ್ಲಾ ಬಂಜಾರ ಭವನಗಳನ್ನು ನಿರ್ಮಿಸುವುದಾಗಿದೆ. ತಾಂಡಗಳಿಗೆ ಸೇವಾಲಾಲ್ ಭವನಗಳ ಮತ್ತು ಸಾಂಸ್ಕೃತಿಕ ಕೇಂದ್ರಗಳನ್ನು ಆಯಾ ವಿಧಾನ ಸಭಾ ಕ್ಷೇತ್ರದ ಶಾಸಕರ ಶಿಫಾರಸ್ಸಿನನ್ವಯ ತಾಂಡ ಅಭಿವೃದ್ಧಿ ನಿಗಮವು ಮಂಜೂರು ಮಾಡುವುದಾಗಿದೆ.

ತಾಂಡಾ ಸಮುದಾಯದ ಜನರು ಮದುವೆ, ಸಭೆ ಸಮಾರಂಭ, ಗ್ರಂಥಾಲಯ ಇತ್ಯಾದಿ ಚಟುವಟಿಕೆಗಳನ್ನು ನಡೆಸಲು ರೂ.20.00ಲಕ್ಷಗಳ ಸೇವಾಲಾಲ್ ಸಮುದಾಯ ಭವನ ಮತ್ತು ರೂ.10.00 ಲಕ್ಷಗಳ ಸಾಂಸ್ಕೃತಿ ಕೇಂದ್ರ, ರೂ.75.00 ಲಕ್ಷಗಳಲ್ಲಿ ಹೋಬಳಿ, ರೂ.200.00 ಲಕ್ಷಗಳಲ್ಲಿ ತಾಲ್ಲೂಕು ಹಾಗೂ ರೂ.400.00 ಲಕ್ಷಗಳಲ್ಲಿ ಜಿಲ್ಲಾಮಟ್ಟದ ಬಂಜಾರ ಭವನಗಳ ನಿರ್ಮಾಣ ಮಾಡಲಾಗುತ್ತಿದೆ. 2011-12ನೇ ಸಾಲಿನಿಂದ ಇಲ್ಲಿಯವರೆಗೆ ಬೆಂಗಳೂರಿನಲ್ಲಿ ಒಂದು ರಾಜ್ಯಮಟ್ಟದ ಬಂಜಾರ ಭವನ, 13 ಜಿಲ್ಲಾ ಬಂಜಾರ ಭವನ, 16 ತಾಲ್ಲೂಕು ಬಂಜಾರ ಭವನ, 11 ಹೋಬಳಿ ಬಂಜಾರ ಭವನ, 1498 ತಾಂಡಾಗಳಲ್ಲಿ ಸೇವಾಲಾಲ್ ಸಮುದಾಯ ಭವನ, 269 ಸಾಂಸ್ಕೃತಿಕ ಕೇಂದ್ರಗಳ ಕಟ್ಟಡಗಳನ್ನು ನಿರ್ಮಿಸಲಾಗಿರುತ್ತದೆ

- **ಸೇವಾಲಾಲ್ ಸಮುದಾಯ ಭವನ** ಮಂಜೂರಾತಿಗಾಗಿ ಗ್ರಾಮ ಪಂಚಾಯಿತಿ ಕಛೇರಿಯಿಂದ ನಮೂನೆ 09 ರಲ್ಲಿ ತಾಂಡದಲ್ಲಿ ಸೇವಾಲಾಲ್ ಸಮುದಾಯ ಭವನದ ಹೆಸರಿನಲ್ಲಿರುವ ನಿವೇಶನದ ಖಾತೆ ಸಂಖ್ಯೆ, ನಿವೇಶನದ ಉದ್ದಗಲ ಅಳತೆ (ಕನಿಷ್ಠ 50*60 ಅಡಿ) ಚಕ್‌ಬಂದಿಯನ್ನು ನಮೂದಿಸಿರುವ ದೃಢೀಕೃತ ದಾಖಲೆ ಹಾಗೂ ಸದರಿ ನಿವೇಶನದಲ್ಲಿ ಸೇವಾಲಾಲ್ ಭವನ ನಿರ್ಮಿಸಲು ಗ್ರಾಮ ಪಂಚಾಯಿತಿಯಿಂದ ಪರವಾನಿಗೆ ದೃಢೀಕರಣ ಪತ್ರವನ್ನು (ಗ್ರಾ.ಪಂ. ಪಿ.ಡಿ.ಓ ರವರಿಂದ ಸಹಿ ಮತ್ತು ಮೋಹರ್) ತಾಂಡದ ಜನರು ಒದಗಿಸಬೇಕು. ಸೇವಾಲಾಲ್ ಸಮುದಾಯ ಭವನಕ್ಕೆ ರೂ.10.00 ಲಕ್ಷ ಮಂಜೂರು ಮಾಡಲಾಗುವುದು. ಇದುವರೆಗೆ 1498 ತಾಂಡಾಗಳಿಗೆ ಸೇವಾಲಾಲ್ ಭವನಗಳನ್ನು ಮಂಜೂರು ಮಾಡಲಾಗಿದೆ.
- **ಸಾಂಸ್ಕೃತಿಕ ಕೇಂದ್ರ:** ಬಂಜಾರರು ವಿಶೇಷ ಆಚಾರ-ವಿಚಾರ, ವೇಷ-ಭೂಷಣ, ಭಾಷೆ, ಕಲೆ, ಹಾಡು ನೃತ್ಯ, ಆಹಾರ-ವಿಹಾರ, ಪೂಜೆ -ಪುನಸ್ಕಾರ ಇತ್ಯಾದಿ ಸಾಂಪ್ರಾದಯಿಕ ಆಚರಣೆಗಳನ್ನು ಮಾಡುತ್ತಾ, ಬಂದಿರುವರು. ಅವರ ಸಾಂಸ್ಕೃತಿಕ ಕಲೆಯನ್ನು ಉಳಿಸಿ ಬೆಳಸಲು ಸಾಂಸ್ಕೃತಿಕ ಕೇಂದ್ರದ ಅಗತ್ಯತೆ ಇರುವುದನ್ನು ಪರಿಗಣಿಸಿ ಸಾಂಸ್ಕೃತಿಕ ಕೇಂದ್ರಗಳ ಸ್ಥಾಪನೆ ಯೋಜನೆಯನ್ನು ನಿಗಮವು ಕೈಗೊಂಡಿರುತ್ತದೆ. ಇದುವರೆಗೆ 269 ತಾಂಡಾಗಳಿಗೆ ಸೇವಲಾಲ್ ಸಾಂಸ್ಕೃತಿಕ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ.

- **ಹೋಬಳಿ ಮಟ್ಟದ ಬಂಜಾರ ಭವನ:** ವನ್ನು ಹೋಬಳಿ ಮಟ್ಟದಲ್ಲಿ ನಿರ್ಮಾಣ ಮಾಡಬೇಕಾಗಿರುತ್ತದೆ. ಬಂಜಾರರು ಮೂಲ ಗ್ರಾಮ/ ಹೋಬಳಿ ಸ್ಥಳಗಳಲ್ಲಿ ವಾಸವಾಗಿರದೇ ದೂರದಲ್ಲಿ ತಮ್ಮದೇ ತಾಂಡಾಗಳನ್ನು ನಿರ್ಮಿಸಿಕೊಂಡು ವಾಸವಾಗಿರುತ್ತಾರೆ. ಈ ಹಿನ್ನಲೆಯಲ್ಲಿ ಬಂಜಾರರು ಹೆಚ್ಚಾಗಿ ನೆಲಸಿರುವ ಆಯಾ ಕಟ್ಟಿನ ತಾಂಡಾ ಅಂದರೆ ಸಾವಿರಕ್ಕಿಂತ ಹೆಚ್ಚು ಮನೆಗಳಿರುವ ತಾಂಡಾವು 4-5ತಾಂಡಾಗಳಿಂದ ಸುತ್ತುವರೆದ ಸ್ಥಳವಾಗಿದ್ದಲ್ಲಿ ಅಂತಹ ತಾಂಡಾವನ್ನು ಬಂಜಾರರಿಗಾಗಿ ಹೋಬಳಿ ಎಂದು ಪರಿಗಣಿಸಿ ಹೋಬಳಿ ಮಟ್ಟದ ಬಂಜಾರ ಭವನವನ್ನು ನಿರ್ಮಿಸಲು ಮಂಜೂರಾತಿ ನೀಡಲಾಗುತ್ತಿದೆ. ಅಂತಹ ತಾಂಡಾ ಇರುವ ಸ್ಥಳದಲ್ಲಿ ಹೋಬಳಿ ಬಂಜಾರ ಭವನದ ಮಂಜೂರಾತಿಗಾಗಿ (ಕನಿಷ್ಠ 08/10 ಗುಂಟೆ ಅಳತೆಯ) ಬಂಜಾರ ಭವನದ ಹೆಸರಿನಲ್ಲಿ ನೋಂದಾಯಿಸಲಾಗಿರುವ/ಕಾಯ್ದಿರಿಸಿರುವ ನಿವೇಶನದ ಖಾತೆ ಮತ್ತು ಚೆಕ್ ಬಂದಿಯನ್ನೊಳಗೊಂಡ ದಾಖಲೆಗಳನ್ನು ಬಂಜಾರ ಸಮುದಾಯದವರು ಮನವಿ ಪತ್ರದೊಂದಿಗೆ ಒದಗಿಸಬೇಕು. ಹೋಬಳಿ ಬಂಜಾರ ಭವನಕ್ಕೆ ರೂ.75.00 ಲಕ್ಷಗಳನ್ನು ಮಂಜೂರು ಮಾಡಲಾಗುವುದು. ಇದುವರೆಗೆ 11 ಹೋಬಳಿ ಮಟ್ಟದಲ್ಲಿ ಬಂಜಾರ ಭವನಗಳನ್ನು ಮಂಜೂರು ಮಾಡಲಾಗಿದೆ.

- **ತಾಲ್ಲೂಕು ಬಂಜಾರ ಭವನ:** ತಾಲ್ಲೂಕು ಕೇಂದ್ರ ಸ್ಥಳದಲ್ಲಿ ತಾಲ್ಲೂಕು ಬಂಜಾರ ಭವನದ ಮಂಜೂರಾತಿಗಾಗಿ (ಕನಿಷ್ಠ 15/20 ಗುಂಟೆ ಅಳತೆಯ) ಬಂಜಾರ ಭವನದ ಹೆಸರಿನಲ್ಲಿ ನೋಂದಾಯಿಸಲಾಗಿರುವ/ಕಾಯ್ದಿರಿಸಿರುವ ನಿವೇಶನದ ಖಾತೆ ಮತ್ತು ಚೆಕ್ ಬಂದಿಯನ್ನೊಳಗೊಂಡ ದಾಖಲೆಗಳನ್ನು ಬಂಜಾರ ಸಮುದಾಯದವರು ಮನವಿ ಪತ್ರದೊಂದಿಗೆ ಒದಗಿಸಬೇಕು. ತಾಲ್ಲೂಕು ಬಂಜಾರ ಭವನಕ್ಕೆ ರೂ.1.5 ಕೋಟಿ ಮಂಜೂರು ಮಾಡಲಾಗುವುದು. ಇದುವರೆಗೆ 16 ತಾಲ್ಲೂಕು ಒಂದು ಹೋಬಳಿ (ರೂ.50.00 ಲಕ್ಷ) ಮಟ್ಟದಲ್ಲಿ ಬಂಜಾರ ಭವನಗಳನ್ನು ಮಂಜೂರು ಮಾಡಲಾಗಿದೆ.
- **ಜಿಲ್ಲಾ ಬಂಜಾರ ಭವನ:** ಜಿಲ್ಲಾ ಕೇಂದ್ರ ಸ್ಥಳದಲ್ಲಿ ಜಿಲ್ಲಾ ಬಂಜಾರ ಭವನದ ಮಂಜೂರಾತಿಗಾಗಿ (ಕನಿಷ್ಠ 1 ರಿಂದ 2 ಎಕರೆ ಅಳತೆಯ) ಜಿಲ್ಲಾ ಬಂಜಾರ ಭವನದ ಹೆಸರಿನಲ್ಲಿ ನೋಂದಾಯಿಸಲಾಗಿರುವ/ಕಾಯ್ದಿರಿಸುವ ನಿವೇಶನದ ಖಾತೆ ಮತ್ತ ಚೆಕ್‌ಬಂದಿಯನ್ನೊಳಗೊಂಡ ದಾಖಲೆಯನ್ನು ಬಂಜಾರ ಸಮುದಾಯದವರು ಮನವಿ ಪತ್ರದೊಂದಿಗೆ ಒದಗಿಸಬೇಕು. ಜಿಲ್ಲಾ ಬಂಜಾರ ಭವನಕ್ಕೆ ರೂ.3 ಕೋಟಿ ಮಂಜೂರು ಮಾಡಲಾಗುವುದು. ಇದುವರೆಗೆ 13 ಜಿಲ್ಲಾ ಬಂಜಾರ ಭವನಗಳನ್ನು ಮಂಜೂರು ಮಾಡಲಾಗಿದೆ.

ಗ್ರಂಥಾಲಯ:

ತಾಂಡಾಗಳಲ್ಲಿನ ಬಂಜಾರ ವಿದ್ಯಾರ್ಥಿಗಳು ಮತ್ತು ವಿದ್ಯಾವಂತರ ವಿದ್ಯಾರ್ಜನೆಯ ಅನುಕೂಲಕ್ಕಾಗಿ ಪಿಠೋಪಕರಣ, ದಿನಪತ್ರಿಕೆ, ಮಾಸಪತ್ರಿಕೆ, ಕಥೆ-ಕಾದಂಬರಿ, ಸ್ಪರ್ಧಾತ್ಮಕ ಪರೀಕ್ಷೆಗೆ ಸಂಬಂಧಿಸಿದ, ಮಕ್ಕಳ ಸಾಹಿತ್ಯ ಪುಸ್ತಕ ಇತ್ಯಾದಿಗಳನ್ನು ಒದಗಿಸಿ ತಾಂಡಾಗಳಲ್ಲಿ 328 ಗ್ರಂಥಾಲಯಗಳನ್ನು ಸ್ಥಾಪಿಸಲಾಗಿದೆ. 2021-22 ಸಾಲಿಗೆ 100 ಗ್ರಂಥಾಲಯಗಳನ್ನು ಸ್ಥಾಪಿಸಲಾಗುವುದು.

ಬಂಜಾರ ಭಾಷಾಭಿವೃದ್ಧಿ ಯೋಜನೆ

- ಬಂಜಾರ ಭಾಷಾ ಅಭಿವೃದ್ಧಿಗೆ ಪ್ರೋತ್ಸಾಹ, ಪ್ರಚಲಿತದಲ್ಲಿರುವ ಬಂಜಾರ ಒಗಟು, ಗಾದೆ, ಜನಪದ ಹಾಡು, ಪೂಜಾ ವಿಂತಿ, ಕಸಳಾತ್ ಮುಂತಾದವುಗಳ ಸಂಗ್ರಹಣೆ ಮತ್ತು ಮುದ್ರಣ.
- ಬಂಜಾರ ಭಾಷಾ ಶಬ್ದಕೋಶ ರಚನೆ.
- ನಿಗಮದಿಂದ ತಾಂಡಾ ವಾರ್ತಾಪತ್ರ ಹೊರಡಿಸುವುದು.
- ಬಂಜಾರ ಪರಾಂಪರಿಕ ಸಾಂಪ್ರದಾಯಗಳ ಬಲವರ್ಧನೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಹ

ಈ ಉದ್ದೇಶಗಳಿಂದ ಡಾ|| ಹಂಪನಾಗರಾಜಯ್ಯರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಗಿತ್ತು. ಸದರಿ ಸಮಿತಿಯು ಸಲ್ಲಿಸಿದ ವರದಿಯನ್ನಾಧರಿಸಿ ಬಂಜಾರ ಭಾಷಾ ಅಭಿವೃದ್ಧಿಗಾಗಿ ಈ ಕೆಳಗಿನಂತೆ ಕ್ರಮಕೈಗೊಳ್ಳಲಾಗಿದೆ.

1. ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿಜಯನಗರ ಜಿಲ್ಲೆ

- ಬಂಜಾರ ಭಾಷಾಭಿವೃದ್ಧಿ ಕೇಂದ್ರವನ್ನು ಕನ್ನಡ ವಿಶ್ವವಿದ್ಯಾಲಯ ಹಂಪಿ ಯಲ್ಲಿ ತೆರೆಯಲು. ರೂ.296.00 ಲಕ್ಷಗಳನ್ನು ಮಂಜೂರು ಮಾಡಲಾಗಿದೆ. ಈ ಅನುದಾನದಲ್ಲಿ ರೂ.100.00 ಲಕ್ಷಗಳಲ್ಲಿ ಭಾಷಾಭಿವೃದ್ಧಿ ಕೇಂದ್ರದ ಕಟ್ಟಡವನ್ನು ನಿರ್ಮಾಣ ಮಾಡಲಾಗಿದೆ.
- ಬಂಜಾರ ಭಾಷಾ ನಿಘಂಟು ರಚನೆ, ವಿಶ್ವಕೋಶ, ಲೆಕ್ಸಿಕಾನ್, ಬಂಜಾರ ಭಾಷಾ ಸಂಪುಟಗಳ ಮುದ್ರಣ, ವ್ಯಾಕಾರಣ ಯೋಜನೆ, ಪ್ರಾಥಮಿಕ ರಚನೆ, ಬಂಜಾರ ಲೇಖಕರ ಕೃತಿಗಳ ಸಂಗ್ರಹಣೆ ಮತ್ತು ಮುದ್ರಣ ಕಾರ್ಯಗಳನ್ನು ಕೈಗೊಳ್ಳಲಾಗಿದೆ.

2. ಕರ್ನಾಟಕ ಜಾನಪದ ವಿಶ್ವ ವಿದ್ಯಾಲಯ ಗೋಟಗೋಡಿ, ಶಿಗ್ಗಾಂವ್, ಹಾವೇರಿ ಜಿಲ್ಲೆ.

- ಜಾನಪದ ವಿಶ್ವವಿದ್ಯಾಲಯ ಗೋಟಗೋಡಿ ಹಾವೇರಿ ಜಿಲ್ಲೆ ಇವರ ಸಹಯೋಗದೊಂದಿಗೆ ಬಂಜಾರ ಮೌಖಿಕ ಭಾಷಾ ಸಾಹಿತ್ಯದ ಸಂಗ್ರಹ ಹಾಗೂ ಗ್ರಂಥ ರಚನೆ ಕಾರ್ಯ ಕೈಗೊಳ್ಳಲಾಗಿದೆ. ಈ ಯೋಜನೆಗೆ ಒಟ್ಟು ರೂ.270.00 ಲಕ್ಷ ಅನುದಾನವನ್ನು ಮಂಜೂರು ಮಾಡಲಾಗಿದೆ.
- ರಾಜ್ಯದ ತಾಂಡಾಗಳ ನಿವಾಸಿಗಳಲ್ಲಿ ಪ್ರಚಲಿತದಲ್ಲಿರುವ ಮೌಖಿಕ ಸಾಹಿತ್ಯ, ಒಗಟು, ಗಾದೆ, ಜಾನಪದ ಕಥೆ, ಹಾಡು, ಕಥನ ಗೀತೆ, ಮಹಾಕಾವ್ಯ, ನುಡಿಗಟ್ಟು ಮುಂತಾದವುಗಳನ್ನು **20 ಬಂಜಾರ ಭಾಷಾ ಸಂಶೋಧಕರ ಮೂಲಕ** ಸಂಗ್ರಹಣೆ ಮಾಡಿ 12 ಗ್ರಂಥಗಳನ್ನು ರಚಿಸಿ ಕನ್ನಡ ಭಾಷೆಯಲ್ಲಿ ಮುದ್ರಣ ಮಾಡಲಾಗಿದೆ.
- ಗ್ರಂಥಗಳ ವಿವರ: 1) ಲಂಬಾಣಿ ಗಾದೆಗಳು 2) ಲಂಬಾಣಿ ಒಗಟುಗಳು 3) ಲಂಬಾಣಿ ರಾಮಾಯಣ 4) ಸೇವಾಲಾಲ್ ಮಹಾಕಾವ್ಯ 5) ಲಂಬಾಣಿ ಜನಪದ ಹಾಡುಗಳು 6) ಲಂಬಾಣಿ ಹಬ್ಬದ ಹಾಡುಗಳು 7) ಲಂಬಾಣಿ ಇತಿಹಾಸ ಮತ್ತು ಸಂಸ್ಕೃತಿ 8) ಲಂಬಾಣಿ ವಿಶೇಸ ಸಾಹಿತ್ಯ 9) ಹೂನಾಸತಿ ಕಥನಾ ಕಾವ್ಯ 10) ಲಂಬಾಣಿ ಕಥನ ಗೀತೆಗಳು 11) ಸೀತಾಸತಿ ಕಥನ ಕಾವ್ಯಗಳು 12) ಭೀಮಾಸತಿ ಕಥನ ಕಾವ್ಯಗಳು
- ಸರ್ಕಾರವು ಬಂಜಾರ ಭಾಷೆ ಮತ್ತು ಸಂಸ್ಕೃತಿ ಅಭಿವೃದ್ಧಿಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಬಂಜಾರ ಭಾಷಾ ಅಕಾಡೆಮಿಯನ್ನು ಸ್ಥಾಪಿಸಿದೆ.

•ಕಲಬುರಗಿ ವಿಶ್ವವಿದ್ಯಾಲಯದಲ್ಲಿ ಸಂತ ಸೇವಾಲಾಲ್ ಅಧ್ಯಯನ ಪೀಠ ಸ್ಥಾಪನೆ.

ಸೇವಾಲಾಲ್‌ರ ಜೀವನ ಚರಿತ್ರೆ ಹಾಗೂ ಅವರ ಸಾಮಾಜಿಕ, ಧಾರ್ಮಿಕ, ಆಧ್ಯಾತ್ಮಿಕ, ವೈದ್ಯಕೀಯ ಸೈದ್ಧಾಂತಿಕ ವಿಚಾರಗಳ ಕುರಿತು ಸಂಶೋಧನಾ ಗ್ರಂಥಗಳನ್ನು ಹೊರತರಲು ಸರ್ಕಾರವು ಕಲಬುರಗಿ ವಿಶ್ವವಿದ್ಯಾಲಯದಲ್ಲಿ ಸಂತ ಸೇವಾಲಾಲ್ ಅಧ್ಯಯನ ಪೀಠವನ್ನು ಸ್ಥಾಪಿಸಿದೆ.

3. ಸೂರಗೊಂಡನಕೊಪ್ಪ ಸೇವಾಲಾಲ್ ಜನ್ಮಸ್ಥಳದ ಸಮಗ್ರ ಅಭಿವೃದ್ಧಿ ಯೋಜನೆ:-

ಬಂಜಾರರ ಕುಲಗುರು, ದಾರ್ಶನಿಕ ಶ್ರೀ ಸಂತ ಸೇವಾಲಾಲ್ ರವರ ಜನ್ಮಸ್ಥಳ ಸೂರಗೊಂಡನಕೊಪ್ಪ (ಭಾಯಗಡ್)ವು ನ್ಯಾಮತಿ ತಾಲ್ಲೂಕು, ದಾವಣಗೆರೆ ಜಿಲ್ಲೆಯಲ್ಲಿ ಇರುತ್ತದೆ.

- ಶ್ರೀ ಕ್ಷೇತ್ರವು 36 ಎಕರೆ ಭೂ ವಿಸ್ತೀರ್ಣ ಹೊಂದಿರುತ್ತದೆ. ಕುಲಗುರುಗಳ ದರ್ಶನಕ್ಕೆ ಬರುವ ಯಾತ್ರಿಗಳಿಗೆ ಮೂಲಭೂತ ಸೌಕರ್ಯ ಒದಗಿಸುವ ನಿಟ್ಟಿನಲ್ಲಿ ಕ್ಷೇತ್ರ ಅಭಿವೃದ್ಧಿಗಾಗಿ ಸಿ.ಸಿ.ರಸ್ತೆ, ಚರಂಡಿ, ಮಹಾದ್ವಾರ, ಕಾಂಪೌಂಡ್, ಬಯಲು ರಂಗಮಂದಿರ, ವಸತಿ ಗೃಹ, ಡಾರ್ಮೆಂಟರಿ, ಶೌಚಾಲಯ, ಶುದ್ಧಕುಡಿಯುವ ನೀರಿನ ಘಟಕ, ಮಧ್ಯವರ್ಜನ ಕೇಂದ್ರ, ಧರ್ಮಶಾಲಾ, ಯಾತ್ರಿನಿವಾಸ, ಗೋಶಾಲೆ, ಸಿಬ್ಬಂದಿ ವಸತಿ ಗೃಹ, ಬಸ್ ನಿಲ್ದಾಣ, ಸಪ್ತ ಮಾತೃಕೆ ಮತ್ತು ಕಲ್ಯಾಣಿ, ನಾಗರಕಟ್ಟೆ, ಸಂತ ಸೇವಾಲಾಲ್ ರ ಜೀವನಾಧರಿತ ಕಲಾಕೃತಿಗಳ ನಿರ್ಮಾಣ, ವಾಜಾ ಮತ್ತು ನೃತ್ಯ ಕುಟೀರಗಳ ನಿರ್ಮಾಣ, ಭೋಜನಾಲಯ, ಕಛೇರಿ ಕಟ್ಟಡ, ಗ್ರಂಥಾಲಯ, ಉದ್ಯಾನವನ, ಶ್ರೀಶ್ರೀಶ್ರೀ ರಾಂರಾವ್ ಮಹಾರಾಜರ ವೇದಿಕೆ, ಸಭಾ ವೇದಿಕೆ, ಹಾತಿರಾಂ ಬಾವಜಿ ಕಟ್ಟೆ, ದುದಿಯ ಕೆರೆ, ವಸ್ತು ಗ್ರಂಥಾಲಯ, ಕಾರಂಜಿ ಇತ್ಯಾದಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.
- ಕರ್ನಾಟಕ ಸರ್ಕಾರದ 2015-16ನೇ ಸಾಲಿನ ಆಯವ್ಯಯದಲ್ಲಿ ಶ್ರೀ ಸಂತ ಸೇವಾಲಾಲ್ ಜನ್ಮಸ್ಥಳದ ಸಮಗ್ರ ಅಭಿವೃದ್ಧಿಗಾಗಿ ಸಂತ ಸೇವಾಲಾಲ್ ಪ್ರತಿಷ್ಠಾನ ಸ್ಥಾಪಿಸಲು ಅನುದಾನವನ್ನು ಮಂಜೂರು ಮಾಡಿದೆ.

2013-14 ರಿಂದ 2020-21 ನೇ ಸಾಲಿನವರೆಗೆ ಸಂತರ ಜನ್ಮಸ್ಥಳದ ಅಭಿವೃದ್ಧಿಗಾಗಿ ರೂ.25.00 ಕೋಟಿ ಅನುದಾನವನ್ನು ಭರಿಸಲಾಗಿದೆ.

4.ಕೊಪ್ಪಳಗಡ್ ಬಹದ್ದೂರ್ ಬಂಡದ ಸಮಗ್ರ ಅಭಿವೃದ್ಧಿ ಯೋಜನೆ:-

ಐತಿಹಾಸಿಕ ಹಾತಿರಾಂ ಬಾವಾಜಿ ಕಟ್ಟೆ ಇರುವ ಬಹದ್ದೂರ್ ಬಂಡ ಪ್ರದೇಶದ ಸಮಗ್ರ ಅಭಿವೃದ್ಧಿಗಾಗಿ ಕರ್ನಾಟಕ ಸರ್ಕಾರವು 2014-15ನೇ ಸಾಲಿನ ಆಯವ್ಯಯದಲ್ಲಿ ಅಭಿವೃದ್ಧಿಗಾಗಿ ಅನುದಾನವನ್ನು ಘೋಷಿಸಿದ್ದು, ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತಿದೆ.

- ಬಂಜಾರರ ಗುರು ಹಾತಿರಾಂ ಬಾವಜಿ ರವರು ಕೊಪ್ಪಳ ಜಿಲ್ಲೆಯ ಬಹದ್ದೂರ ಬಂಡೆ ಗ್ರಾಮದಲ್ಲಿ ಕೆಲಕಾಲ ನೆಲೆಸಿ ತಪ್ಪಸ್ಸು ಮಾಡಿದ ಸ್ಥಳದಲ್ಲಿ ಬಾವಾಜಿ ಕಟ್ಟೆ ಇರುತ್ತದೆ.
- ಬಂಜಾರರು ಈ ಬಾವಾಜಿ ಕಟ್ಟೆಯನ್ನು ಪೂಜ್ಯ ಭಾವನೆಯಿಂದ ಕಾಣುತ್ತಾರೆ.
- ಈ ಸ್ಥಳದಲ್ಲಿ ಬಂಜಾರರು ಅಲೆಮಾರಿಯಾಗಿ ವ್ಯಾಪಾರ ನಡೆಸುತ್ತಿದ್ದ ಸಮಯದಲ್ಲಿ ವರ್ಷದ 2 ತಿಂಗಳು ತಂಡೋಪ ತಂಡವಾಗಿ ದೇಶದ ಮೂಲೆ ಮೂಲೆಗಳಿಂದ ಬಂದು ನೆಲೆಸಿ ಸಾಮಾಜಿಕ, ಧಾರ್ಮಿಕ, ವೈವಾಹಿಕ, ಕಾರ್ಯಗಳನ್ನು ನಡೆಸುತ್ತಿದ್ದರು ಎಂಬ ಐತಿಹ್ಯ ಇದೆ. ಈ ಸ್ಥಳದಲ್ಲಿ ಪ್ರತಿ ವರ್ಷ ಬಂಜಾರರ ಪ್ರತಿಷ್ಠಿತ ಹಬ್ಬವಾದ ಹೋಳಿ ಉತ್ಸವನ್ನು ಆಚರಿಸಲಾಗುತ್ತಿದೆ.
- ಈ ಐತಿಹಾಸಿಕ ಸ್ಥಳದ ಅಭಿವೃದ್ಧಿಗಾಗಿ ನಿಗಮವು 9 ಎಕರೆ ಜಮೀನನ್ನು ಖರೀದಿಸಿ ಬಂಜಾರ ಭವನ, ಬಾವಾಜಿ ಕಟ್ಟೆಯ ಬೃಹತ್ ಪ್ರದಕ್ಷಣಾ ಪಥ, ಅತಿಥಿ ಗೃಹ, ಕಾಂಪೌಂಡ್ ಮತ್ತು ಮುಖ್ಯದ್ವಾರ ನಿರ್ಮಾಣ ಮಾಡಲಾಗಿದ್ದು, ಯೋಜನೆಯಂತೆ ಕ್ರಮಕೈಗೊಳ್ಳಲಾಗುತ್ತಿದೆ.

5. ತಾಂಡಾ ನಿವಾಸಿಗಳಿಗೆ ಅರಿವು ಮತ್ತು ಜಾಗೃತಿ ಕಾರ್ಯಕ್ರಮಗಳು:-

ತಾಂಡಗಳಲ್ಲಿ ಸಾಕ್ಷ್ಯಚಿತ್ರ ಪ್ರದರ್ಶನ, ಬೀದಿ ನಾಟಕ, ಸಭೆ ಸಮಾರಂಭ, ಮಡಿಕೆ ಹಾಳೆ, ಭಿತ್ತಿಚಿತ್ರ ಇತ್ಯಾದಿಗಳ ಮೂಲಕ ತಾಂಡ ನಿವಾಸಿಗಳಿಗೆ ಮಾಹಿತಿ ಒದಗಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

- ನಿಗಮ ಮತ್ತು ಸರ್ಕಾರ ಅಭಿವೃದ್ಧಿ ಯೋಜನೆಗಳ ಮಾಹಿತಿ ಒದಗಿಸುವುದು.
- ಮಾಹಿತಿ ಹಕ್ಕು, ಶಿಕ್ಷಣ ಹಕ್ಕು, ಮತದಾನದ ಹಕ್ಕು, ಕೆಲಸದ ಹಕ್ಕು ಇತ್ಯಾದಿ ಪ್ರಚಲಿತ ಕಾಯ್ದೆಗಳ ಮಾಹಿತಿ.
- ಬಂಜಾರ ಜನರ ಪಾರಂಪರಿಕ ಮತ್ತು ಸಾಂಸ್ಕೃತಿಕ ಸಂಪ್ರದಾಯಕ ಕಾರ್ಯಕ್ರಮಗಳಿಗೆ ಉತ್ತೇಜನ.

ತಾಂಡಾ ವಿಕಾಸ ಸಮಿತಿ ರಚನೆ, ನಿಗಮ ಮತ್ತು ಸರ್ಕಾರದ ಯೋಜನೆಗಳ ಮಾಹಿತಿ ಮದ್ಯಪಾನ ಧೂಮಪಾನ ಇತ್ಯಾದಿ ದುಶ್ಚಟಗಳಿಂದಾಗುವ ಪರಿಣಾಮಗಳು ಮತ್ತು ಮಾದರಿ ತಾಂಡ ಪರಿಕಲ್ಪನೆ ಇವುಗಳ ಕುರಿತು 4 ಸಾಕ್ಷ್ಯಚಿತ್ರಗಳನ್ನು ಸಿದ್ಧಪಡಿಸಿ ತಾಂಡಗಳಲ್ಲಿ ಪ್ರದರ್ಶನ ಮಾಡಿ ಜಾಗೃತಿ ಮೂಡಿಸಲಾಗಿದೆ.